ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 2 ಮಾರ್ಚ್ 25, 1979 40 ಪೈಸೆ

ಸಂಪಾದಕೀಯ

ಹೊರೆಯ ಮೇಲೆ ಹೊರೆ

ಕಾಂಗ್ರೆಸ್ ಸರಕಾರದ 30 ವರ್ಷಗಳ ಕಾಲದ ಸತತ ಕರಭಾರದಿಂದ ತತ್ತರಿಸುತ್ತಿದ್ದ ಜನಸಾಮಾನ್ಯರು, ಕಾರ್ಮಿಕರು ಮತ್ತು ಹಳ್ಳಿಯ ಬಡವರ ಮೇಲೆ ಚರಣಸಿಂಗರ ಮುಂಗಡ ಪತ್ರ ಇನ್ನೂ ಹೆಚ್ಚಿನ ಹೊರೆಯನ್ನು ಹೇರಿತು. ಗ್ರಾಮಗಳ ಅಭಿವೃದ್ಧಿ, ಕೃಷಿಕರಿಗೆ ಅನುಕೂಲವಾದದ್ದೆಂದು ಕೊಂಡಾಡಿಕೊಂಡ ಚರಣಸಿಂಗರ ಮುಂಗಡ ಪತ್ರದಲ್ಲಿನ ದೊಡ್ಡಪ್ರಮಾಣದ ಹೊಸ ತೆರಿಗೆಗಳು, ಮತ್ತು ಖೋತಾಗಳಿಂದ ಹಣದುಬ್ಬರ ಮತ್ತು ಬೆಲೆಏರಿಕೆಯಾಗುವುದು ಸ್ವಾಭಾವಿಕ. ಈಗಾಗಲೇ ಪರಿಣಾಮ ಕಂಡುಬಂದಿದೆ. ಬಂಡವಾಳಶಾಹಿ ಮಾರುಕಟ್ಟೆಯು ಜನಜೀವನವನ್ನು ನಿಯಂತ್ರಿಸುವ ಈ ಕಾಲದಲ್ಲಿ ಯಾವುದೇ ಜನೋಪಯೋಗಿ ಮತ್ತು ಇತರ ವಸ್ತುಗಳ ಮೇಲೆ ಕರಭಾರ ಹೊರಿಸಿದರೆ, ಪರಿಣಾಮ ಎಲ್ಲಾ ರಂಗಗಳಿಗೂ ವ್ಯಾಪಿಸುವುದು.

ರಾಜ್ಯ ಸಾರಿಗೆ ಸಂಸ್ಥೆಯು ಮತ್ತು ನಗರ ಸಾರಿಗೆ ಸಂಸ್ಥೆಯ ಬಸ್ ಪ್ರಯಾಣ ದರವನ್ನು ಏರಿಸಲು ಕಾಯುತ್ತಿದ್ದ ಕರ್ನಾಟಕ ರಾಜ್ಯ ಸರಕಾರವು ಕೂಡಲೆ ನಗರ ಸಾರಿಗೆ ಬಸ್ ದರವನ್ನು ಬಹಳಷ್ಟು ಹೆಚ್ಚಿಸಿದೆ. ಜನಸಾಮಾನ್ಯರು ಬಳಸುವ ಸೀಮೆಎಣ್ಣೆಗೆ ಹೊಸ ತೆರಿಗೆಯಿಂದ ಬೆಲೆ ಏರಿದ್ದು ಮಾತ್ರವಲ್ಲ, ಬೆಂಗಳೂರು ಮತ್ತು ರಾಜ್ಯದ ಹಲವೆಡೆ ಸೀಮೆಎಣ್ಣೆಯ ಕೃತಕ ಅಭಾವದಿಂದ ಜನತೆಯು ಬಹಳ ಕಷ್ಟಕ್ಕೊಳಗಾಗಿದೆ. ಜೀವನೋಪಯೋಗಿ ವಸ್ತುಗಳು ದುಬಾರಿಯಾಗಿವೆ. ಕೇಂದ್ರ ಸರಕಾರದ ಮುಂಗಡ ಪತ್ರದ ಪರಿಣಾಮದಿಂದ ಜನತೆಯು ಕಂಗೆಟ್ಟಿರುವಾಗ, ರಾಜ್ಯ ಸರಕಾರದ ವಾರ್ಷಿಕ ಮುಂಗಡ ಪತ್ರವು ಇನ್ನೂ ಹೊರೆಯನ್ನು ಹೇರಿದೆ.

ಆಕ್ಟ್ರಾಯಿ ತೆರಿಗೆ ರದ್ದುಮಾಡಬೇಕೆಂಬ ಬೇಡಿಕೆ ವಿರೋಧ ಪಕ್ಷಗಳದ್ದು ಆಗಿದ್ದು, ಇದು ಮಾಡಿದ್ದು ಸ್ವಾಗತಾರ್ಹ. ಆದರೆ ವ್ಯಾಪಾರದ ತೆರಿಗೆ ಮೇಲೆ ಇನ್ನೂ ಶೇಕಡಾ 10 ರಷ್ಟು ಸರ್‌ಚಾರ್ಜ್ (ಹೆಚ್ಚಿನ ತೆರಿಗೆ) ಹೇರಿರುವುದರಿಂದ ಜನಸಾಮಾನ್ಯರಿಗೆ ಬಹಳ ತೊಂದರೆಯಾಗಿದೆ. ಪತ್ರಿಕಾ ವರದಿಯಂತೆ, ಈ ಮುಂಗಡ ಪತ್ರಕ್ಕೆ ಮೊದಲೇ ಬೇರೆ ಎಲ್ಲಾ ರಾಜ್ಯಗಳಿಗಿಂತಲೂ ಈ ರಾಜ್ಯದಲ್ಲಿ ತೆರಿಗೆ ಭಾರ ಅತೀ ಹೆಚ್ಚಿಗಿದ್ದು, ಇನ್ನಂತೂ ಇದು ಇನ್ನೂ ಹೆಚ್ಚಲಿದೆ.

ದೇಶವನ್ನು ಬಂಡವಾಳಶಾಹಿ ಪಥದಲ್ಲಿ ಕೊಂಡೊಯ್ಯಲು ಶ್ರಮಿಸುವ ನಮ್ಮ ದೇಶದ ಭೂಮಾಲಕ-ಬಂಡವಾಳಶಾಹಿ ವ್ಯವಸ್ಥೆಯು ತೀವ್ರವಾದ ಆರ್ಥಿಕ ಬಿಕ್ಕಟ್ಟಿನಲ್ಲಿದೆ. ಹಣದುಬ್ಬರ ಮತ್ತು ಔದ್ಯಮಿಕ ಹಿಂದೆಗೆತಗಳಿಂದ ಕೂಡಿದ ಆರ್ಥಿಕ ಬಿಕ್ಕಟ್ಟನ್ನು ಹೋಗಲಾಡಿಸಬೇಕಾದರೆ ಮತ್ತು ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸಬೇಕಾದರೆ ಜನಸಾಮಾನ್ಯರ ಮೇಲೆ ಹೊಸ ಕರಭಾರವನ್ನು ಹೇರುವುದರಿಂದ ಸಾಧ್ಯವಿಲ್ಲ. ಬದಲು, ದೊಡ್ಡ ಬಂಡವಾಳಶಾಹಿಗಳು, ಭೂಮಾಲಕರು ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳ ಹಿಡಿತದಿಂದ ನಮ್ಮ ಅರ್ಥವ್ಯವಸ್ಥೆಯನ್ನು ವಿಮೋಚನೆಗೊಳಿಸುವುದು ಮತ್ತು ಸ್ವತಂತ್ರ ತಳಹದಿಯ ಮೇಲೆ ನಮ್ಮ ಅರ್ಥವ್ಯವಸ್ಥೆಯನ್ನು ಬೆಳೆಸುವುದರಿಂದ ಸಾಧ್ಯ. ಕೃಷಿ ಕ್ಷೇತ್ರದಲ್ಲಿ ಕ್ರಾಂತಿ, ಸ್ವತಂತ್ರ ತಳಹದಿಯ ಮೇಲೆ ರಾಷ್ಟ್ರದ ಜನತೆಯ ಆಶೋತ್ತರಗಳನ್ನು ಪೂರೈಸುವ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ರೀತಿಯ ಔದ್ಯಮೀಕರಣ, ಇವುಗಳಿಂದ ಸರ್ವತೋಮುಖ ಪ್ರಗತಿ, ಜನತೆಗೆ ಉದ್ಯೋಗ ಕೊಡಲು ಸಾಧ್ಯ. ಇದು ಸಾಧ್ಯವಾಗಬೇಕಾದರೆ ಕಾಂಗ್ರೆಸ್ ಸರಕಾರವು ಅನುಸರಿಸಿದ್ದ, ಈಗ ಜನತಾ ಸರಕಾರವು ಅನುಸರಿಸುವ ದೇಶವನ್ನು ಬಂಡವಾಳಶಾಹಿ ಪಥದಲ್ಲಿ ಕೊಂಡೊಯ್ಯುವ ಆರ್ಥಿಕ ನೀತಿಯು ಸಂಪೂರ್ಣ ಬದಲಾಗಬೇಕು. ಬಜೆಟ್ಟಿನಲ್ಲಿರುವ ಆದ್ಯತೆಗಳು, ಬಜೆಟ್ಟಿನಲ್ಲಿರುವ ತೆರಿಗೆ ನೀತಿ, ಆಯವ್ಯಯ-ಇವೆಲ್ಲಾ ಶ್ರಮಜೀವಿಗಳ ಪರವಾಗಿ ಇರಬೇಕು.

ಬಡಜನತೆಯ ಮೇಲಿನ ದಬ್ಬಾಳಿಕೆ ನಿಲ್ಲಲಿ

ಪ್ರಜಾಪ್ರಭುತ್ವ, ಸಮಾಜವಾದ, ಮತ್ತು ವರ್ಗಸಂಘರ್ಷಗಳ ಬಗ್ಗೆ ಭಾಷಣ ಬಿಗಿಯುವ ದೇವರಾಜ ಅರಸ್ ಅವರ ಸರಕಾರವು ದಿನೇ ದಿನೇ ಕಾರ್ಮಿಕರ ಮತ್ತು ಬಡರೈತರ ಮೇಲೆ ದಬ್ಬಾಳಿಕೆಯನ್ನು ಹೆಚ್ಚಿಸುತ್ತಲಿದೆ. ವರ್ಗಸಂಘರ್ಷವನ್ನು ಪ್ರತಿಪಾದಿಸುವ ಅರಸು ಸರಕಾರ ಕಳೆದ ಒಂದು ವರ್ಷದಲ್ಲಿ ಕಾರ್ಮಿಕರ ನ್ಯಾಯಯುತವಾದ ಹತ್ತಾರು ಮುಷ್ಕರಗಳನ್ನು ನಿಷೇಧಿಸಿದೆ. ಕಾರ್ಮಿಕರ ಹೋರಾಟಗಳನ್ನು ಹತ್ತಿಕ್ಕಲು ಮತ್ತು ಮಾಲಕರಿಗೆ ಸಹಾಯ ಮಾಡಲು ಪೋಲೀಸ್ ಪಡೆಗಳನ್ನು ಉಪಯೋಗಿಸುವುದು ಎಲ್ಲೆಲ್ಲೂ ಕಂಡುಬಂದಿದೆ. ಪ್ಲಾಂಟೇಷನ್, ಬೀಡಿ ಉದ್ಯಮಗಳ ಲಕ್ಷಾಂತರ ಕೆಲಸಗಾರರಿಗೂ, ಲಕ್ಷಾಂತರ ಮಂದಿ ಕೃಷಿ ಕೆಲಸಗಾರರಿಗೂ ಹೆಚ್ಚು ಕನಿಷ್ಟ ವೇತನ ನಿಗದಿ ಮಾಡುವುದಿರಲಿ, ಇದ್ದ ಕನಿಷ್ಟ ವೇತನ ಜಾರಿಗಾಗಿ ಶ್ರಮಜೀವಿಗಳು ನಡೆಸುವ ಹೋರಾಟವನ್ನು ದಮನಗೊಳಿಸಲಾಗುತ್ತಿದೆ.

ಬಡ ರೈತರಿಗೆ ಭೂಮಿಕೊಡುವ ಆಶ್ವಾಸನೆಯನ್ನು ಕೊಡುತ್ತಾ ಬಂದಿರುವ ರಾಜ್ಯ ಸರಕಾರ ಇದೀಗ ಕೊಡಗು ಜಿಲ್ಲೆಯ ತಿತಿಮತಿ ಪ್ರದೇಶದಲ್ಲಿ 30-40 ವರ್ಷಗಳಿಂದ ಅರಣ್ಯದಲ್ಲಿ ಕೃಷಿಮಾಡಿ ಜೀವನ ಮಾಡಿಕೊಂಡು ಬಂದ ನೂರಾರು ರೈತರನ್ನು ಅಮಾನುಷ ರೀತಿಯಲ್ಲಿ ಒಕ್ಕಲೆಬ್ಬಿಸುತ್ತಲಿದೆ. ಅರಣ್ಯಾಧಿಕಾರಿಗಳೂ, ಪೋಲೀಸ್ ಪಡೆಗಳೂ ಸೇರಿ ರೈತರ ಮನೆಗಳನ್ನು ಕೆಡವಿ ಒಕ್ಕಲೆಬ್ಬಿಸಲು ಪ್ರಯತ್ನಿಸುತ್ತಲಿದ್ದಾರೆ. ಈಗಾಗಲೇ ಕೆಲವು ಮನೆಗಳು ನಾಶವಾಗಿವೆ. ಪ್ರಾಣಿಸಂರಕ್ಷಣೆಮಾಡಲು ಸ್ಥಳ ಬೇಕೆಂಬ ಕಾರಣದಿಂದ ಈ ರೀತಿಯ ಅಮಾನುಷ ಕಾರ್ಯವನ್ನೆಸಗುವುದು ಖಂಡನೀಯ. ರಾಜ್ಯದ ಎಲ್ಲೆಡೆಗಳಲ್ಲೂ ಸರಕಾರದ ರೈತ ವಿರೋಧಿ ನೀತಿಯು ಕಂಡುಬಂದಿದೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಪ್ರದೇಶದಲ್ಲಿ ವರಾಹಿ ಯೋಜನೆಯಿಂದಲಾಗಿ ಸಹಸ್ರಾರು ಬಡ ಕುಟುಂಬಗಳು ಊರೂರು ಅಲೆವಂತಾಗಿದೆ; ಧಾರವಾಡ-ಬಿಜಾಪುರ ಜಿಲ್ಲೆಯ ನೀರಾವರಿ ಪ್ರದೇಶಗಳಲ್ಲಿ ಬೆಟರ್‌ಮೆಂಟ್ ತೆರಿಗೆಯಿಂದ ಸಾಮಾನ್ಯ ರೈತರು ಕಂಗೆಟ್ಟಿರುವರು.

ಜೀತ ಪದ್ಧತಿಯನ್ನು ಹೋಗಲಾಡಿಸಿರುವೆವೆಂದು ಪ್ರಚಾರ ಮಾಡಿದ್ದು ಮಾತ್ರ. ಪತ್ರಿಕಾ ವರದಿಯಂತೆ ರಾಜ್ಯದಲ್ಲಿ ಇನ್ನೂ 180 ಸಾವಿರ ಜೀತದಾಳುಗಳಿರುವರಂತೆ. ಜೀತದಿಂದ ಮುಕ್ತರಾದವರಿಗೆ ಬೇರೆ ಸರಿಯಾದ ಅವಕಾಶಗಳಿಲ್ಲದಿರುವುದರಿಂದ, ಕೃಷಿ ಕೂಲಿ ವೇತನ ಬಹಳ ಕಡಿಮೆ ಇರುವುದರಿಂದ ಇವರ ಜೀವನ ಶೋಚನೀಯವಾಗಿದೆಯಂತೆ. ಈ ಹಿನ್ನೆಲೆಯಲ್ಲಿ ಶ್ರಮಜೀವಿಗಳ, ರೈತರ ಮತ್ತು ಜನಸಾಮಾನ್ಯರ ಪ್ರತಿಭಟನೆ ಮತ್ತು ಹೋರಾಟ ಬೆಳೆಯುವುದು ಸ್ವಾಭಾವಿಕ.

ಸರಕಾರವು ತನ್ನ ದಮನ ನೀತಿಯನ್ನು ಮುಂದುವರಿಸಿದಲ್ಲಿ ರಾಜ್ಯದಾದ್ಯಂತ ಶ್ರಮಜೀವಿಗಳ ಐಕ್ಯ ಹೋರಾಟವನ್ನು ನಡೆಸಲೇ ಬೇಕಾಗುತ್ತದೆ. ಸದ್ಯ ಕೊಡಗು ಜಿಲ್ಲೆಯಲ್ಲಿ ಸರಕಾರವು ನಡೆಸುತ್ತಿರುವ ದಬ್ಬಾಳಿಕೆಯ ವಿರುದ್ಧ ನಡೆಯುವ ಹೋರಾಟವು ಜಿಲ್ಲೆಗೆ ಮಾತ್ರ ಸೀಮಿತವಾಗುವುದೆಂದು ಸರಕಾರವು ಭ್ರಮೆಯನ್ನು ಇರಿಸಿಕೊಂಡಲ್ಲಿ ತಪ್ಪಾದೀತು.

ತಮ್ಮ ಪಕ್ಷ ವಾಮಪಕ್ಷವೆಂಬುದನ್ನು ಸಿ ಪಿ ಐ ನಾಯಕರು ಸ್ಥಾಪಿಸಿಕೊಳ್ಳಬೇಕು

ಇ.ಎಂ.ಎಸ್. ನಂಬೂದಿರಿಪಾದ್

ಕೇರಳದ ಸರ್ಕಾರವು ಎಡಪಂಥೀಯ ಸರ್ಕಾರವಲ್ಲ ಎಂದು ಹೇಳಿದ ಜ್ಯೋತಿ ಬಸು ಅವರ ಬಗ್ಗೆ ಕೋಪವನ್ನು ಪ್ರದರ್ಶಿಸಿದ ಸಿ.ಪಿ.ಐ. ಯ ಕೇರಳದ ಕಾರ್ಯದರ್ಶಿ ಎನ್.ಇ. ಬಲರಾಮ್ ಅವರನ್ನು ಅನುಸರಿಸಿ. ಅವರ ಕೇಂದ್ರ ಸೆಕ್ರೆಟೇರಿಯೆಟ್ ಸದಸ್ಯರಾದ ರಾಜಶೇಖರ ರೆಡ್ಡಿಯವರು ಫೆಬ್ರುವರಿ 18ರ ನ್ಯೂ ಏಜ್‌ನಲ್ಲಿ ಒಂದು ಲೇಖನ ಬರೆದಿದ್ದಾರೆ. "ಸಿ. ಪಿ. ಐ. (ಎಂ) ನ ಶರತ್ತುಗಳು ಎಡ ಐಕ್ಯತೆಗೆ ಪ್ರಯೋಜನಕಾರಿಯಲ್ಲ" ಎಂಬ ಹೆಸರಿನ ಲೇಖನದಲ್ಲಿ ಅವರು ಹೀಗೆ ಬರೆದಿದ್ದಾರೆ:

"ಸಿ.ಪಿ.ಐ. (ಎಂ) ನ ನಾಯಕರು ಐಕ್ಯತೆಯ ಬಗ್ಗೆ ಅಷ್ಟೇನೂ ಉತ್ಸಾಹಿಗಳಲ್ಲ. ಕೆಲವು ಮಿತಿಗಳೊಂದಿಗೆ ಆ ಕೆಲಸ ನಡೆಯಲು ಅವರು ಒಪ್ಪಿಯಾರಷ್ಟೆ. ಮತ್ತೆ ಮತ್ತೆ ಅವರು ಆ ಮಿತಿಗಳನ್ನು ಹೇಳುತ್ತಾರೆ ಮತ್ತು ಐಕ್ಯ ಕಾರ್ಯಾಚರಣೆಗೆ ಶರತ್ತುಗಳನ್ನು ಒಡ್ಡುತ್ತಾರೆ".

ಅವತ್ತಿನ ಮುಖ್ಯ ರಾಜಕೀಯ ಪ್ರಶ್ನೆಯ ಬಗ್ಗೆ (ತುರ್ತುಪರಿಸ್ಥಿತಿಯ ಬಗ್ಗೆ) ಎರಡು ಪಕ್ಷಗಳೂ ಪರಸ್ಪರ ವಿರೋಧಿಯಾಗಿದ್ದ ನಿಲುವುಗಳನ್ನು ತಳೆದಿದ್ದರೂ ಕೂಡ, ಕಾರ್ಮಿಕವರ್ಗ, ರೈತಾಪಿಗಳು ದೈನಂದಿನ ಬೇಡಿಕೆಗಳಿಗಾಗಿ ನಡೆಸುವ ಹೋರಾಟಗಳಲ್ಲಿ ಎರಡು ಪಕ್ಷಗಳೂ ಒಟ್ಟುಗೂಡಬಹುದೆಂದು ಸಿ.ಪಿ.ಐ. (ಎಂ.) ನ ನಾವು, ತುರ್ತುಪರಿಸ್ಥಿತಿಯ ದಿನಗಳಲ್ಲಿ ಹೇಳಿದ್ದನ್ನು ಈ ಲೇಖಕರು ಮರೆತಿದ್ದಾರೆ. "ಐಕ್ಯ ಕಾರ್ಯಾಚರಣೆಯಲ್ಲಿ ತೊಡಗುವುದಕ್ಕೆ ಮುಂಚೆ ಕನಿಷ್ಠ ಪ್ರಮಾಣದ ರಾಜಕೀಯ ಐಕ್ಯತೆ ಇರಬೇಕು." ಎಂದು ಆಗ ಸಿ.ಪಿ.ಐ. ನಾಯಕರು ಉತ್ತರಿಸಿದ್ದರು. (1976ರ ಆ ತಿಂಗಳಲ್ಲಿ ನನಗೂ ಸಿ.ಪಿ.ಐ. ನ ಪ್ರಧಾನ ಕಾರ್ಯದರ್ಶಿಗೂ ಈ ರೀತಿಯ ಸಂವಾದ ನಡೆಯಿತು).

1977 ರ ಲೋಕಸಭೆ ಚುನಾವಣೆಯಲ್ಲಿ ಸಿ.ಪಿ.ಐ. ನವರು ಪಡೆದ ಬಲವಾದ ಹೊಡೆತಗಳಿಂದ, ಆ ನಂತರದಲ್ಲಿ ಅದರ ನಾಯಕರು ತಮ್ಮ ನಿಲುವನ್ನು ಬದಲಾಯಿಸಿಕೊಂಡಿದ್ದು ಒಳ್ಳೆಯ ವಿಚಾರ. "ಕನಿಷ್ಠ ರಾಜಕೀಯ ಒಪ್ಪಂದ" ಎಂದು ಐಕ್ಯತೆಗೆ ಅವರು ಹಾಕಿದ್ದ ಶರತ್ತನ್ನು ಹಿಂತೆಗೆದುಕೊಂಡದ್ದೂ ಒಳ್ಳೆಯದೇ. ರಾಜಶೇಖರ ರೆಡ್ಡಿಯವರೇ ತಮ ಲೇಖನದಲ್ಲಿ ಹೇಳುವಂತೆ:

"ಸಂಯುಕ್ತ ಕಾರ್ಯಕ್ರಮಗಳು ಮೊದಲು ಕಾರ್ಮಿಕಸಂಘದ ರಂಗದಲ್ಲಿ ಆರಂಭವಾಗಿ ನಿಧಾನವಾಗಿ ಕಿಸಾನ್ ಮತ್ತು ಕೃಷಿ ಕಾರ್ಮಿಕರು, ವಿದ್ಯಾರ್ಥಿ ರಂಗ ಇವೆಲ್ಲಕ್ಕೂ ವಿಸ್ತರಿಸಲ್ಪಟ್ಟಿತು. ಇವನ್ನು ದೇಶದಾದ್ಯಂತ ನಡೆಸಲಾಗಿಲ್ಲ. ಆದರೆ ಎಲ್ಲೆಲ್ಲಿ ನಡೆದಿವೆಯೋ ಅಲ್ಲೆಲ್ಲ ಒಳ್ಳೆಯ ಫಲಿತಾಂಶ ಬಂದಿದೆ. ಪರಸ್ಪರ ಒಪ್ಪಬೇಕಾದ ವಲಯಗಳು ತುಂಬ ಇವೆ ಎಂದು ಎರಡೂ ಕಡೆಯವರು ಕಂಡುಕೊಂಡಿದ್ದಾರೆ. ಅಲ್ಲದೆ, ಅನೇಕ ಸಂಗತಿಗಳಲ್ಲಿ ಜನತೆಯ ಐಕ್ಯ ಕಾರ್ಯಾಚರಣೆ ನಡೆಸುವುದು ಸಾಧ್ಯವೂ ಇದೆ, ಹಾಗೆ ಮಾಡುವುದರ ಅಗತ್ಯವೂ ಇದೆ ಎಂದು ತಿಳಿದುಬಂದಿದೆ".

(8ನೇ ಪುಟ ನೋಡಿ)

ಕೊಡಗು ಜಿಲ್ಲಾ ವಾರ್ತಾ ಪತ್ರ

ತಿತಿಮತಿಯಲ್ಲಿ ರೈತರ ಮೇಲೆ ಸರಕಾರದ ದಬ್ಬಾಳಿಕೆ

ಕೊಡಗು ಜಿಲ್ಲೆಯ ಗೋಣಿಕೊಪ್ಪದ ಸುತ್ತಮುತ್ತಲಿನ ತಿತಿಮತಿ, ಮತ್ತಿಗೋಡು, ಮುಳ್ಳಿಪಟ್ಟ, ಆನೆ ಚೌಕೂರು ಮೊದಲಾದ ಗ್ರಾಮಗಳಲ್ಲಿ ಸರಕಾರಿ ಅರಣ್ಯ ಪ್ರದೇಶದಲ್ಲಿ ಸುಮಾರು 30–40 ವರ್ಷಗಳಿಂದ ನೂರಾರು ಮಂದಿ ಬಡಜನರು ಕೃಷಿ ಮಾಡಿ ಜೀವನ ಮಾಡುತ್ತಾ ಬಂದಿರುವರು. ಇವರಲ್ಲಿ ಕೆಲವರಿಗೆ ಭೂಮಿ ಖಾಯಂ ಆಗಿದೆ. ಉಳಿದವರಲ್ಲಿ ಬಹಳ ಮಂದಿಗೆ ಸರಕಾರವೇ ಭೂಮಿಯನ್ನು ಗೇಣಿಗೆ ಕೊಟ್ಟಿತ್ತು. ಈ ಪ್ರದೇಶದಲ್ಲಿ ಬಂಜರು ಭೂಮಿ, ಅರಣ್ಯಕ್ಕೆ ಬದಲಾಗಿ ಈಗ ಕೃಷಿ ಮಾಡುವುದರಿಂದ ವರ್ಷವೊಂದಕ್ಕೆ 10,000 ಕ್ವಿಂಟಾಲ್ ಭತ್ತವೇ ಬೆಳೆಯುತ್ತದೆ. ಪ್ರತಿ ಚುನಾವಣೆ ಸಂದರ್ಭದಲ್ಲಿ ರಾಜಕೀಯ ಮುಖಂಡರು, ಅದರಲ್ಲೂ ಕಾಂಗ್ರೆಸ್ ಮುಖಂಡರುಗಳು ಅರಣ್ಯದಲ್ಲಿ ವಾಸಮಾಡುವವರ ಪ್ರತಿ ಮನೆಗೂ ಒಂದು ಭೂಮಿಯನ್ನು ಖಾಯಂ ಮಾಡಿಸುವ ಆಶ್ವಾಸನೆಯಿತ್ತು ಓಟು ಗಿಟ್ಟಿಸಿಕೊಂಡಿರುವರು. ಕಳೆದ ಅಸೆಂಬ್ಲಿ ಚುನಾವಣೆ ಸಂದರ್ಭ ಕಾಂಗ್ರೆಸ್ ಮುಖಂಡರುಗಳು ಮನೆಮನೆಗೆ ಬಂದು, ಮತ್ತೆ ಆಶ್ವಾಸನೆ ಇತ್ತರು.

ಇದೀಗ ಸರಕಾರವು ಈ ಅರಣ್ಯ ಪ್ರದೇಶವನ್ನು ಪ್ರಾಣಿಗಳನ್ನು ಸಾಕುವ ಪ್ರದೇಶವನ್ನಾಗಿ ಮಾಡಿ, ಪ್ರವಾಸಿಗರಿಗೆ ಆಕರ್ಷಣೆ ಮತ್ತು ಮನರಂಜನೆ ಕೊಡುವ ಯೋಜನೆ ಹಾಕಿದ್ದು, ಕೃಷಿ ಮಾಡಿಕೊಂಡು ಬಂದ ನೂರಾರು ಜನರನ್ನು ಬಲಾತ್ಕಾರವಾಗಿ ಒಕ್ಕಲೆಬ್ಬಿಸುತ್ತಲಿದೆ. ಈ ಜನರಿಗೆ ಗುಡ್ಡಲೂರು ಎಂಬ ಒಣಪ್ರದೇಶದಲ್ಲಿ ಭೂಮಿ ಕೊಡುವುದಾಗಿಯೂ, ಹಣದ ಸಹಾಯ ಮಾಡುವುದಾಗಿಯೂ ಸರಕಾರ ಭ್ರಮೆ ತೋರಿಸಿದೆ. ಈ ಭ್ರಮೆ, ವಂಚನೆಗಳಿಗೆ ಬಲಿಬೀಳದ ರೈತರು ಜೀವ ತೆರಬೇಕಾಗಿ ಬಂದರೂ ತಿತಿಮತಿ ಪ್ರದೇಶವನ್ನು ಬಿಟ್ಟು ಹೋಗುವುದಿಲ್ಲ ಎಂದು ತೀರ್ಮಾನಿಸಿದರು. ಬಡವರ ಐಕ್ಯತೆಯನ್ನು ಮುರಿಯುವ ದೃಷ್ಟಿಯಿಂದ ಹರಿಜನಗಿರಿಜನರಿಗೆ ಭೂಮಿ ಕೊಡುವೆವು, ಉಳಿದವರು ಇಲ್ಲಿಂದ ಹೋಗಬೇಕೆಂದು ಸರಕಾರ ಹೇಳುತ್ತಲಿದೆ. ಕಳೆದ ತಿಂಗಳು ಅರಣ್ಯಾಧಿಕಾರಿಗಳು ಆನೆಗಳನ್ನು ಮತ್ತು ಬಂದೂಕು ತೋರಿಸಿ, ಕೃಷಿಕರು ಮಾಡಿದ ಹೊಲಗಳಲ್ಲಿ ಬಿದಿರು ನೆಡುವುದಕ್ಕಾಗಿ ಹೊಂಡ ತೋಡಿಸಿದರು. ಬಲಾತ್ಕಾರಕ್ಕೆ ರೈತರು ಬಗ್ಗದಿರುವಾಗ ಅಮಾನುಷ ದಬ್ಬಾಳಿಕೆಯೂ ಪ್ರಾರಂಭವಾಯಿತು. ಮಾರ್ಚ್ 13 ರಂದು ಅರಣ್ಯಾಧಿಕಾರಿಗಳು, ಪೋಲೀಸರ ಸಹಾಯದಿಂದ ಆನೆ ಚೌಕೂರು, ಮುಳ್ಳಿಪಟ್ಟ ಮೊದಲಾದೆಡೆ 8 ಮನೆಗಳ ಚಾವಣಿಗಳನ್ನು ಕೆಡವಿದರು. ಆದರೂ ರೈತರು ಭಯಬೀಳದೆ, ಅಲ್ಲೇ ವಾಸ ಮುಂದುವರಿಸಿದರು. 15 ರಂದು ಮುಖ್ಯಮಂತ್ರಿಯವರು ಕೊಡಗಿನ ಮಡಿಕೇರಿಗೆ ಬಂದಿರುವಾಗ, ನೂರಾರು ಜನರು ಮೆರವಣಿಗೆಯಲ್ಲಿ ಹೋಗಿ ಕಾ॥ ಅಸ್ರಣ್ಣನವರ ನೇತೃತ್ವದಲ್ಲಿ ಒಂದು ಮನವಿಯನ್ನು ಅರ್ಪಿಸಿದರು. ಆದರೆ ಸಮಾಜವಾದದ ಬೊಬ್ಬಿಡುವ ಅರಸು ಅವರ ಸರ್ಕಾರಕ್ಕೆ ಹತ್ತಾರು ವರ್ಷಗಳಿಂದ ಕೃಷಿ ಮಾಡುತ್ತಾ ಬಂದು ದೇಶದ ಆಹಾರ ಉತ್ಪಾದನೆಗೂ, ಪ್ರಗತಿಗೂ ಸಹಕಾರ ಮಾಡಿದ ರೈತರಿಗೆ ಭೂಮಿ ಕೊಡುವುದಕ್ಕಿಂತಲೂ ಮುಖ್ಯ ಈ ರೈತರ ಗೋರಿಯ ಮೇಲೆ ಪ್ರಾಣಿಗಳನ್ನು ಸಾಕುವುದಾಗಿದೆ. ಶ್ರೀ ಅರಸುರವರು ಹೋದ ಮೇಲೆ 16 ರಂದು ಮತ್ತೆ ಅರಣ್ಯಾಧಿಕಾರಿಗಳೂ, ಪೋಲೀಸರೂ ಬಂದು ಮನೆಗಳನ್ನು ಕೆಡವಿ, ಜನರನ್ನೂ ಅವರ ಸಾಮಾನುಗಳನ್ನೂ ಬಲಾತ್ಕಾರವಾಗಿ ಲಾರಿಗಳಲ್ಲಿ ತುಂಬಿ ಇನ್ನೆಲ್ಲೋ ತಗೊಂಡುಹೋಗಿ ಬಿಡುತ್ತಲಿದ್ದಾರೆ. ಸರಕಾರದ ಪೊಳ್ಳು ಭರವಸೆ ಮತ್ತು ಈ ಅಮಾನುಷಕತೆಯ ವಿರುದ್ಧ ಹೋರಾಡಲು ಈ ಪ್ರದೇಶದ ಎಲ್ಲಾ ಬಡಜನತೆಯೂ ಒಂದಾಗಿದೆ. ಜಿಲ್ಲೆಯಾದ್ಯಂತ ಬೆಂಬಲ ಬೆಳೆಯುತ್ತಲಿದೆ. "ಪ್ರಾಣಿ ಸಂರಕ್ಷಣೆಯ ಸ್ಥಳ ಬೇಕು. ಆದರೆ ಹಲವಾರು ವರ್ಷಗಳಿಂದ ಕೃಷಿ ಮಾಡಿ, ಅಭಿವೃದ್ಧಿ ಮಾಡಿರುವ ರೈತರ ಗೋರಿ ಮೇಲೆ ಪ್ರಾಣಿಗಳನ್ನು ಸಾಕುವುದು ಬೇಡ ಎಂದು ಜನರು ಆಡಿಕೊಳ್ಳುತ್ತಲಿರುವರು".

ಕೊಡಗಿನ ತಿತಿಮತಿ ಪ್ರದೇಶದ ಬಡ ರೈತರ ಹೋರಾಟವನ್ನು ಹತ್ತಿಕ್ಕಲು ಶ್ರೀ ಅರಸು ಅವರ ಸರಕಾರ ದೃಢ ನಿರ್ಧಾರ ಮಾಡಿದಂತಿದೆ. ಆದರೆ ಜನತೆಯ ಒಗ್ಗಟ್ಟು, ದೃಢನಿರ್ಧಾರಗಳ ಎದುರು ಪೋಲೀಸ್ ಬಲವನ್ನು ಉಪಯೋಗಿಸಿ ಫಲವಿಲ್ಲ ಎಂಬುದನ್ನು ಅರಸು ಸರಕಾರ ತಿಳಿದಿರಬೇಕು. ತಿತಿಮತಿ ಪ್ರದೇಶದ ಬಡ ರೈತರ ಮೇಲಿನ ದಬ್ಬಾಳಿಕೆಯನ್ನು ಕೂಡಲೇ ನಿಲ್ಲಿಸಿ, ಅವರನ್ನು ಒಕ್ಕಲೆಬ್ಬಿಸುವ ಬದಲು ಅಲ್ಲೇ ಭೂಮಿ ಖಾಯಂಗೊಳಿಸಿಲ್ಲವಾದರೆ ಕೊಡಗು ಜಿಲ್ಲೆಯಾದ್ಯಂತವೂ, ರಾಜ್ಯದಲ್ಲೂ ಜನತೆ ಐಕ್ಯಹೋರಾಟ ಮಾಡಿಯೇ ತೀರುವುದು.

•

ಬಂಜರು ಭೂಮಿಗಾಗಿ ಹೋರಾಟಕ್ಕೆ ಬೆಂಗಳೂರು ಜಿಲ್ಲಾ ರೈತ ಸಂಘದ ಕರೆ

ತಲಗಟ್ಟಪುರದಲ್ಲಿ ಮೆರವಣಿಗೆ, ಬಹಿರಂಗ ಸಭೆ

ಬೆಂಗಳೂರು ಜಿಲ್ಲೆ ದಕ್ಷಿಣ ತಾಲ್ಲೂಕು ತಲಗಟ್ಟಪುರದಲ್ಲಿ ತಾ॥ 19-3-79 ರಂದು ಸಂಜೆ ರೈತ ಮತ್ತು ಕೃಷಿ ಕೂಲಿಗಾರರ ಬೃಹತ್ ಮೆರವಣಿಗೆ, ಬಹಿರಂಗ ಸಭೆ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾ॥ ಮುಗವಾಳಪ್ಪನವರು ವಹಿಸಿದ್ದರು. ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ॥ ಜಗನ್ನಾಥನವರ, ಸ್ವಾಗತ ಭಾಷಣ ಮಾಡಿದರು. ಬಹಿರಂಗ ಸಭೆಯನ್ನುದ್ದೇಶಿಸಿ ಸಿ.ಐ.ಟಿ.ಯು. ರಾಜ್ಯ ಸಮಿತಿ ಅಧ್ಯಕ್ಷ ಕಾ॥ ಸೂರ್ಯನಾರಾಯಣ ರಾವ್, ಕನ್ನಡ ಚಳುವಳಿಯ ನಾಯಕ ಶ್ರೀ ವಾಟಾಳ್ ನಾಗರಾಜ್, ಜಿಲ್ಲಾ ರೈತ ಸಂಘದ ಮುಂದಾಳುಗಳಾದ ಕಾ॥ ಶ್ರೀನಿವಾಸ್, ಕಾ॥ ಶಾಮಣ್ಣ ರೆಡ್ಡಿ, ಮೊದಲಾದವರು ಮಾತನಾಡಿದರು. ಬಂಜರು ಭೂಮಿಯನ್ನು ಭೂರಹಿತ ಬಡ ಜನರಿಗೆ ಹಂಚುವುದಕ್ಕಾಗಿಯೂ, ಈಗಾಗಲೇ ಕೃಷಿ ಮಾಡುತ್ತಲಿರುವ ಬಡಜನತೆಗೆ ಭೂಮಿಯನ್ನು ಖಾಯಂಗೊಳಿಸುವಂತೆ ಸರಕಾರದ ಮೇಲೆ ಒತ್ತಾಯ ಹೇರಲೂ ರೈತ, ಕೃಷಿ ಕೂಲಿಗಾರರ ಚಳುವಳಿಯನ್ನು ಜಿಲ್ಲೆಯಾದ್ಯಂತ ನಡೆಸಲು ರೈತ ಸಂಘದ ಮುಂದಾಳುಗಳು ಕರೆಯಿತ್ತರು. ಕೃಷಿ ಕೂಲಿಗಾರರ ಕನಿಷ್ಟ ವೇತನವನ್ನು ಹೆಚ್ಚಿಸಲು, ಸಾಲ ವಸೂಲಿಗಾಗಿ ಬಡವರ ಮನೆಯನ್ನು ಜಪ್ತಿ ಮಾಡುವುದನ್ನು ನಿಲ್ಲಿಸಿ ಸಾಲ ರದ್ದಾತಿ ಮಾಡಲು, ಗೇಣಿ ವಿಳಂಬ ನೀತಿಯನ್ನು ಪ್ರತಿಭಟಿಸಲು, ಬೆಲೆ ಏರಿಕೆ, ಬಸ್ ದರ ಏರಿಕೆಯನ್ನು ಪ್ರತಿಭಟಿಸಲು ರೈತ, ಕೃಷಿ ಕೂಲಿಗಾರರೂ, ಜನಸಾಮಾನ್ಯರೂ ಐಕ್ಯ ಹೋರಾಟವನ್ನು ನಡೆಸಲು ಸಭೆಯನ್ನುದ್ದೇಶಿಸಿ ಮಾತನಾಡಿದ ಮುಂದಾಳುಗಳು ಕರೆಯಿತ್ತರು.

ಸಭೆಯ ಕೊನೆಗೆ ದಲಿತ ವಿದ್ಯಾರ್ಥಿಗಳಿಂದ "ಜೀತದಟ್ಟಿ ರಂಗ" ಎಂಬ ನಾಟಕವನ್ನು ಪ್ರದರ್ಶಿಸಲಾಯ್ತು. ಕಾ॥ ಲಕ್ಕಣ್ಣನವರು ವಂದನಾರ್ಪಣೆ ಮಾಡಿದರು.

•

ವಿರಾಜಪೇಟೆಯಲ್ಲಿ ಬೃಹತ್ ಸಭೆ, ಮೆರವಣಿಗೆ

ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ 24–2–79 ರಂದು ಸಂಜೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ರೈತ, ಕಾರ್ಮಿಕರ ಬೃಹತ್ ಮೆರವಣಿಗೆ, ಬಹಿರಂಗ ಸಭೆಗಳು ಜರುಗಿತು. ಸ್ವಯಂಸೇವಕರಿಂದ ಕೂಡಿದ ಸಭೆಯು ಆಕರ್ಷಣೀಯವಾಗಿದ್ದು, ಕಳೆದ ಕೆಲವು ವರ್ಷಗಳಿಂದೀಚೆಗೆ ನಡೆದ ಮೆರವಣಿಗೆಗಳಲ್ಲಿ ಅತಿ ದೊಡ್ಡದಾಗಿತ್ತು. ಬಹಿರಂಗ ಸಭೆಯನ್ನುದ್ದೇಶಿಸಿ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್, ಸೆಕ್ರೆಟೇರಿಯಟ್ ಸದಸ್ಯ ಮತ್ತು ರೈತ ಸಂಘಟನೆಯ ಸಂಚಾಲಕ ಕಾಂ. ಪಿ. ರಾಮಚಂದ್ರರಾವ್ ಅವರು ಭಾಷಣ ಮಾಡಿದರು. ಕಾಂಗ್ರೆಸ್ ಸರಕಾರದ ಕಾರ್ಮಿಕ ವಿರೋಧಿ ಧೋರಣೆಯ ವಿರುದ್ಧ, ಹಳ್ಳಿಯ ಬಡವರಿಗೆ ಕೊಡುವ ಕಿರುಕುಳದ ವಿರುದ್ಧ ಹೋರಾಡಲು ಇವರು ಕರೆಯಿತ್ತರು. ರಾಷ್ಟ್ರದಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಜನತಾ ಪಕ್ಷಕ್ಕೆ ಬದಲಾಗಿ ಎಡ ಪ್ರಜಾಪ್ರಭುತ್ವ ಶಕ್ತಿಗಳ ಒಕ್ಕೂಟವನ್ನು ಶ್ರಮಜೀವಿಗಳ ಐಕ್ಯತೆಯ ಆಧಾರದ ಮೇಲೆ ಬೆಳೆಸುವುದಕ್ಕೆ ಮುಂದಾಗಲು ಎಂ. ಕೆ. ಭಟ್ ಅವರು ಕರೆಯಿತ್ತರು. ಜಿಲ್ಲಾ ಕಾರ್ಮಿಕ ಮುಂದಾಳು, ಡಾ॥ ಅಸ್ರಣ್ಣ ಅವರು ಅಧ್ಯಕ್ಷತೆ ವಹಿಸಿದ್ದರು. ತಿತಿಮತಿಯ ಶ್ರೀಮತಿ ಲಲಿತ ಅವರು ದೇವರಾಜ ಅರಸ್ ಸರಕಾರವು ಸರಕಾರಿ ಭೂಮಿಯಲ್ಲಿ ಸುಮಾರು 30 ವರ್ಷಗಳಿಂದ ವಾಸವಾಗಿರುವ ಬಡ ರೈತರನ್ನು ಬಲಾತ್ಕಾರವಾಗಿ ಎಬ್ಬಿಸುವುದರ ಬಗ್ಗೆ ಹೇಳಿ, ಇದರ ವಿರುದ್ಧ ಹೋರಾಟಕ್ಕೆ ಬೆಂಬಲ ಕೋರಿದರು.

ತಿತಿಮತಿಯಲ್ಲಿ ಮೆರವಣಿಗೆ, ಸಭೆ

ಕೊಡಗು ಜಿಲ್ಲೆಯ ತಿತಿಮತಿಯ ಸುತ್ತಮುತ್ತ ಫಾರೆಸ್ಟ್ ಭೂಮಿಯಲ್ಲಿ ಕಳೆದ ಮೂವತ್ತು ವರ್ಷಗಳಿಂದ ಕೃಷಿ ಮಾಡಿ, ವಾಸಮಾಡಿಕೊಂಡಿರುವ ಬಡ ರೈತರನ್ನು ದೇವರಾಜ ಅರಸ್ ಅವರ ಸರಕಾರವು ದಬ್ಬಾಳಿಕೆಯ ಮೂಲಕ ಒಕ್ಕಲೆಬ್ಬಿಸುವ ಪ್ರಯತ್ನ ನಡೆಸುತ್ತಲಿದೆ. ಫಾರೆಸ್ಟ್ ಅಧಿಕಾರಿಗಳು, ಆನೆಗಳನ್ನು ತೋರಿಸಿ, ಕೋವಿಯನ್ನು ಹಿಡಿದು ರೈತರ ಗದ್ದೆಯಲ್ಲಿ ಬಿದಿರು ನೆಡಲು ಹೊಂಡ ತೆಗೆಸಿರುವರು. ಪ್ರತಿ ಚುನಾವಣೆ ಸಮಯದಲ್ಲೂ ಕಾಂಗ್ರೆಸ್ ಮುಖಂಡರುಗಳು ಮನೆ ಮನೆಗೆ ಹೋಗಿ ಚುನಾವಣೆ ಆದ ಮೇಲೆ ಭೂಮಿಯನ್ನು ಖಾಯಂಗೊಳಿಸುವೆವೆಂದು ಆಶ್ವಾಸನೆ ಕೊಡುತ್ತಾ ಬಂದಿರುವರು. ಆದರೆ ಈಗ ಪ್ರಾಣಿಗಳನ್ನು ಸಾಕಲು ಬೇಕೆಂಬ ಕಾರಣದಿಂದ ಸುಮಾರು 280 ರೈತರನ್ನು ಬಲಾತ್ಕಾರದಿಂದ ಒಕ್ಕಲೆಬ್ಬಿಸಲು ಪ್ರಯತ್ನಗಳು ನಡೆದಿವೆ. ಕಾಂಗ್ರೆಸ್ (ಐ) ಶಾಸಕ ಮತ್ತಿತರ ಮುಖಂಡರುಗಳು ತೆಪ್ಪಗಿರುವುದು ಮಾತ್ರವಲ್ಲ, ಸರಕಾರದ ಈ ಧೋರಣೆಗೆ ಲಿಖಿತ ಬೆಂಬಲ ಕೊಟ್ಟಿರುವ ವರದಿಯೂ ಇದೆ.

ಸರಕಾರದ ಈ ಅಮಾನುಷ ಕ್ರಮದ ವಿರುದ್ಧ 25–2–79 ರಂದು ರೈತ, ಕಾರ್ಮಿಕರ ಬೃಹತ್ ಪ್ರತಿಭಟನಾ ಮೆರವಣಿಗೆ, ಸಭೆಗಳು ಜರುಗಿದವು. ಮೆರವಣಿಗೆ ಮತ್ತು ಸಭೆಯಲ್ಲಿ ನೂರಾರು ಮಂದಿ ಪ್ಲಾಂಟೇಷನ್ ಕೆಲಸಗಾರರು ಭಾಗವಹಿಸಿ, ಸರಕಾರದ ರೈತ ವಿರೋಧಿ ಧೋರಣೆ ವಿರುದ್ಧ ನಡೆಸುವ ಹೋರಾಟಕ್ಕೆ ಬೆಂಬಲವಿತ್ತರು. ಮೆರವಣಿಗೆಯನ್ನು ವೀಕ್ಷಿಸಿದ ಜನರು, ಕಳೆದ 15 ವರುಷಗಳಲ್ಲಿ ಇಷ್ಟು ಭಾರಿ ಪ್ರಮಾಣದ ಮೆರವಣಿಗೆ, ಸಭೆ ನಡೆದಿಲ್ಲ ಎಂಬ ಅಭಿಪ್ರಾಯವಿತ್ತರು. ಸಭೆಯ ಅಧ್ಯಕ್ಷತೆಯನ್ನು ಡಾ॥ ಅಸ್ರಣ್ಣ ವಹಿಸಿದ್ದರು. ಕಾಂ. ಎಂ.ಕೆ. ಭಟ್ ಮತ್ತು ಕಾಂ. ಪಿ. ರಾಮಚಂದ್ರರಾವ್ ಅವರು ಸಭೆಯಲ್ಲಿ ಮಾತನಾಡುತ್ತಾ ತಿತಿಮತಿಯ ರೈತರ ಹೋರಾಟಕ್ಕೆ ಸಂಪೂರ್ಣ ಬೆಂಬಲ ಸೂಚಿಸಿದರು. ಶ್ರೀಮತಿ ಲಲಿತ ಮತ್ತು ಇತರ ಸ್ಥಳೀಯ ಮುಖಂಡರುಗಳೂ ಮಾತನಾಡಿದರು. ಡಾ॥ ಅಸ್ರಣ್ಣನವರು ರೈತರ ಗೋರಿಗಳ ಮೇಲೆ ಸರಕಾರವು ಪ್ರಾಣಿಗಳನ್ನು ಸಾಕುವ ಗುಡ್ಡವನ್ನು ಬೆಳೆಸಲಿ ಎಂದರು. ಸರ್ವಪಕ್ಷದವರನ್ನೊಳಗೊಂಡ ಜಂಟಿ ಕ್ರಿಯಾ ಸಮಿತಿಯ ಮೂಲಕ ತಿತಿಮತಿಯ ರೈತರ ಹೋರಾಟವನ್ನು ಮುಂದೊಯ್ಯುವ ನಿರ್ಣಯವನ್ನು ಕೈಗೊಳ್ಳಲಾಯ್ತು.

•

ರಾಜ್ಯ ಲೇಬರ್ ವೆಲ್‌ಫೇರ್ ಬೋರ್ಡಿಗೆ ಕಾ॥ ಸೂರಿಯವರ ಸೇರ್ಪಡೆ

ಕರ್ನಾಟಕ ರಾಜ್ಯ ಲೇಬರ್ ವೆಲ್‌ಫೇರ್ ಬೋರ್ಡನ್ನು ಸರಕಾರವು ಪುನಸಂಘಟಿಸಿದ್ದು, ರಾಜ್ಯ ಸಿ.ಐ.ಟಿ.ಯು.ವಿನ ಅಧ್ಯಕ್ಷ ಕಾ॥ ಸೂರ್ಯನಾರಾಯಣರಾವ್ ಅವರನ್ನು ಬೋರ್ಡಿಗೆ ಸೇರಿಸಿಕೊಂಡಿದೆ. ಕಾ॥ ಸೂರಿಯವರಲ್ಲದೆ, ಐ.ಎನ್.ಟಿ.ಯು.ಸಿ., ಎ.ಐ.ಟಿ.ಯು.ಸಿ. ಮತ್ತು ಬಿ.ಎಮ್.ಎಸ್. ಪ್ರತಿನಿಧಿಗಳೂ ಇರುವರು.

•

ಆರ್ಥಿಕ ಸಮೀಕ್ಷೆ:

ಗುತ್ತೇದಾರಿ ಕುಟುಂಬಗಳ ಆಸ್ತಿಗಳಲ್ಲಿ ಭಾರೀ ಹೆಚ್ಚಳ !

—ಆರ್. ಚಂದ್ರ

ರೂ. ಕೋಟಿಗಳಲ್ಲಿ.

ಗುತ್ತೇದಾರಿ ಕೈಗಾರಿಕಾ ಕುಟುಂಬಗಳ ಹೆಸರು.	1972		1976	
	ಆಸ್ತಿ	ತೆರಿಗೆಯ ಮೊದಲು ಲಾಭ	ಆಸ್ತಿ	ತೆರಿಗೆಯ ಮೊದಲು ಲಾಭ
ಬಿರ್ಲಾ	589.42	45.86	974.63	118.84
ಟಾಟಾ	641.93	48.92	980.77	56.12
ಮಫತ್‌ಲಾಲ್	183.74	14.65	256.54	25.90
ಜೆ. ಕೆ. ಶಿಂಘಾನಿಯಾ	121.45	5.92	241.23	7.97
ಆಯಿಲ್ ಇಂಡಿಯಾ	104.04	15.02	202.59	19.55
ಥಾಪರ್	136.16	11.04	202.24	15.81
ಐ.ಸಿ.ಐ.	135.21	17.47	198.97	32.76
ಬಂಗೂರ್	125.26	7.52	195.33	6.19
ಸಿಂಧಿಯಾ	107.73	5.44	177.08	5.63
ಶ್ರೀರಾಮ್	120.77	10.48	171.70	0.43
ಭಿವಾರಡಿವಾಲಾ	45.91	3.93	166.43	12.20
ಎ.ಸಿ.ಸಿ.	134.36	4.45	160.21	5.73
ಕಿರ್ಲೋಸ್ಕರ್	86.46	2.03	152.47	13.90
ಲಾರ್ಸೆನ್ ಮತ್ತು ಟೌಬ್ರೋ	79.03	4.65	147.74	16.09
ವಾಲ್‌ಚಂದ್	99.47	1.22	129.42	2.58
ಮಹೀಂದ್ರ ಮತ್ತು ಮಹೀಂದ್ರ	58.49	3.65	126.06	6.97
ಹಿಂದುಸ್ಥಾನ್ ಲಿವರ್	77.87	11.48	122.51	21.58
ಮೋದಿ	58.05	7.35	117.79	3.84
ಸಾರಾಭಾಯ್	84.44	3.63	116.73	(—) 0.35
ಮಾಸ್‌ನೆಲ್ ಮತ್ತು ಮಾಗರ್	64.80	2.80	113.35	19.63
ಕಸ್ತೂರಿಭ್ಯಾ ಲಾಲ್‌ಭ್ಯಾ	78.61	9.04	109.63	17.29
ಟಿ.ವಿ.ಎಸ್.	50.97	7.72	105.78	14.04
ಐ.ಟಿ.ಸಿ.	74.65	9.03	105.08	9.43
ಬಜಾಜ್	63.32	8.72	101.51	7.67
ಬಾಟಾ (ಬಾಂಬೆ)	75.44	6.82	100.22	14.85

ಸಾಧಾರ: ಇಕಾನೊಮಿಕ್ ಟ್ಯಾಮ್ಸ್, ಕಲ್ಕತ್ತ: 6-2-1979.

ಸ್ವಾತಂತ್ರ್ಯ ನಂತರದ ಭಾರತದ ರಾಜ್ಯ ಪ್ರಭುತ್ವವು ಬಂಡವಾಳಶಾಹಿ ಮತ್ತು ಭೂಮಾಲಕ ವರ್ಗದ್ದಾಗಿದ್ದು, ದೊಡ್ಡ ಬಂಡವಾಳಶಾಹಿಗಳು ಅದರ ನೇತೃತ್ವವನ್ನು ಹೊಂದಿದ್ದು, ಬಂಡವಾಳಶಾಹಿ ಪದ್ಧತಿಯ ಅಭಿವೃದ್ಧಿ ಮಾರ್ಗವನ್ನು ಅನುಸರಿಸುತ್ತಾ ಅವು ಹೆಚ್ಚು ಹೆಚ್ಚಾಗಿ ವಿದೇಶಿ ಬಂಡವಾಳದೊಂದಿಗೆ ಸಹಕರಿಸುತ್ತಿವೆ ಎಂದು ಭಾರತದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ದೇಶ ಭಾಂದವರಿಗೆ ಎಚ್ಚರಿಸುತ್ತಾ ಬಂದಿದೆ. ಬಂಡವಾಳಶಾಹಿ ಆರ್ಥಿಕ ಅಭಿವೃದ್ಧಿಯಿಂದಾಗಿ, ಸದ್ಯದ ಸಮಾಜ ವ್ಯವಸ್ಥೆಯ ನೇತೃತ್ವದಲ್ಲಿರುವ ದೊಡ್ಡ ಬಂಡವಾಳಶಾಹಿಗಳು ಗುತ್ತೇದಾರಿ ಕೈಗಾರಿಕಾ ಕುಟುಂಬಗಳು ತಮ್ಮ ಆಸ್ತಿ, ಆದಾಯ ಮತ್ತು ಲಾಭಗಳನ್ನು ಅತ್ಯಧಿಕವಾಗಿ ಹೆಚ್ಚಿಸುತ್ತಲೇ ಬಂದಿರುವುದನ್ನು ಇದು ತನಕ ಪ್ರಕಟಿಸಿದ ಅಧಿಕೃತವಾದ ಅಂಕೆ ಸಂಖ್ಯೆಗಳಿಂದ ತಿಳಿಯುವುದು. ಅವುಗಳಲ್ಲಿ ಇದೇ ಕಳೆದ ಫೆಬ್ರವರಿ ತಿಂಗಳ 5 ರಂದು ಕೇಂದ್ರ ಸರಕಾರದ ಕಂಪೆನಿ ವ್ಯವಹಾರಗಳ ಖಾತೆಯು 81 ಗುತ್ತೇದಾರಿ ಕೈಗಾರಿಕಾ ಕುಟುಂಬಗಳಿಗೆ 1972-76 ಅವಧಿಗೆ ಸಂಬಂಧಿಸಿದ ಆಸ್ತಿ, ವ್ಯವಹಾರ ಮತ್ತು ಲಾಭಗಳ ವಿವರಣೆಗಳು ಎಲ್ಲಾ ಸಮಾಜ ಚಿಂತಕರಿಗೂ ಅತ್ಯಂತ ಮಹತ್ವವಾಗಿರುವುವು.

ಯಾವುದೇ ಒಂದು ಕೈಗಾರಿಕಾ ಸಂಸ್ಥೆಯು ಸ್ವತಃ ಅಥವಾ ಒಂದೇ ಕುಟುಂಬಕ್ಕೆ ಸಂಬಂಧಿಸಿದ ಇತರ ಸಂಸ್ಥೆಗಳೊಂದಿಗೆ ರೂ. 20 ಕೋಟಿ ಮತ್ತು ಅದಕ್ಕಿಂತಲೂ ಹೆಚ್ಚು ಆಸ್ತಿ ಮೌಲ್ಯ ಹೊಂದಿದ್ದರೆ ಅದನ್ನು 1969ರ MRTP (ಗುತ್ತೇದಾರಿ ಸಂಸ್ಥೆಗಳ ನಿಯಂತ್ರಣ) ಕಾಯಿದೆಯಂತೆ ಗುತ್ತೇದಾರಿ ಕೈಗಾರಿಕಾ ಸಂಸ್ಥೆ ಎಂದು ಪರಿಗಣಿಸಲಾಗುವುದು. ಈ ಕಾಯಿದೆಯ ನಿಯಂತ್ರಣಕ್ಕೆ ಒಳಗಾಗದಿರುವಂತೆ, ಬಂಡವಾಳಶಾಹಿಗಳು ಸತತ ಪ್ರಯತ್ನ ಮಾಡುತ್ತಲೇ ಇವೆ. ಕಂಪೆನಿಗಳನ್ನು ತಮ್ಮ ಬಿನಾಮಿಗಳಿಂದ ನಡೆಸುವುದೂ, ಒಂದೇ ಕುಟುಂಬದವರು ಒಡೆದು ಎರಡು ಅಥವಾ ಹೆಚ್ಚು ಕುಟುಂಬದವರಂತೆ ದಾಖಲೆ ಮಾಡಿಸುವುದೂ ಸರ್ವೆಸಾಮಾನ್ಯವಾಗಿದೆ. ಹಾಗಿದ್ದರೂ, ಹೊಸತಾಗಿ ಪ್ರಕಟಿಸಿದ ಅಂಕೆ ಸಂಖ್ಯೆಗಳಂತೆ, ಜೂನ್ 30, 1978 ರಷ್ಟರಲ್ಲಿ ಇಂತಹ 81 ಗುತ್ತೇದಾರಿ ಕೈಗಾರಿಕಾ ಕುಟುಂಬಗಳು ದೇಶಾದ್ಯಂತ 1000ಕ್ಕೂ ಹೆಚ್ಚಿನ ಕಂಪೆನಿಗಳನ್ನು ಹೊಂದಿದ್ದು, 1972-76ರ ನಾಲ್ಕು ವರುಷಗಳ ಅವಧಿಯಲ್ಲಿ ಅವುಗಳ ಆಸ್ತಿ ಮೌಲ್ಯವು ರೂ. 5597 ಕೋಟಿಯಿಂದ ರೂ. 8990 ಕೋಟಿಗೇರಿತು. ಅರ್ಥಾತ್, ಈ ಅವಧಿಯಲ್ಲಿ ಅವುಗಳ ಆಸ್ತಿ ಮೌಲ್ಯವು ರೂ. 3393 ಕೋಟಿಯಷ್ಟು-ಶೇಕಡಾ 60-63ರಷ್ಟು ಹೆಚ್ಚಿತು. ಈ 81 ಕುಟುಂಬಗಳಲ್ಲಿಯೂ, ರೂ. 100 ಕೋಟಿಗೂ ಅಧಿಕ ಆಸ್ತಿ ಮೌಲ್ಯವಿರುವ 25 ಅತಿ ದೊಡ್ಡ ಕುಟುಂಬಗಳ ಒಟ್ಟು ಆಸ್ತಿ ಮೌಲ್ಯವು ಇದೇ ಅವಧಿಯಲ್ಲಿ ರೂ. 3398 ಕೋಟಿಯಿಂದ ರೂ. 5476 ಕೋಟಿಗೇರಿತ್ತು; ಅಂದರೆ, ರೂ. 2078 ಕೋಟಿಯಷ್ಟು-ಶೇಕಡಾ 61.2 ರಷ್ಟು ಹೆಚ್ಚಾಯಿತು. ರಿಸರ್ವ್ ಬ್ಯಾಂಕ್ ಅಧ್ಯಯನ ಆಧರಿತವಾದ 'ಇಕನಾಮಿಕ್ ಟ್ಯಾವರ್ಸ್' ಪತ್ರಿಕೆಯ ಅಂದಾಜಿನಂತೆ, ಇದೇ ಅವಧಿಯಲ್ಲಿ, ಒಟ್ಟು ಖಾಸಗೀ ಕೈಗಾರಿಕಾರಂಗದ ಆಸ್ತಿ ಮೌಲ್ಯವು ರೂ. 11, 829 ಕೋಟಿಯಿಂದ ರೂ. 17.251 ಕೋಟಿಗೇರಿತ್ತು. ಅಂದರೆ, ರೂ. 5422 ಕೋಟಿಯಷ್ಟು-ಶೇಕಡಾ 45.8 ರಷ್ಟು ಹೆಚ್ಚಿತ್ತು. ಈ ನಾಲ್ಕು ವರುಷಗಳಲ್ಲಿ, ಗುತ್ತೇದಾರಿ ಕುಟುಂಬಗಳ ಅಗ್ರಸ್ಥಾನದಲ್ಲಿರುವ ಬಿರ್ಲಾ ಮನೆತನದ ಒಟ್ಟು ಆಸ್ತಿ ಮೌಲ್ಯವು ರೂ. 589.42 ಕೋಟಿಯಿಂದ ರೂ. 974.63 ಕೋಟಿಗೇರಿದ್ದು—ರೂ. 385.211 ಕೋಟಿ ಶೇಕಡಾ 65 ರಷ್ಟು ಹೆಚ್ಚಳವಾಗಿದ್ದು, ಟಾಟಾ ಮನೆತನದ ಆಸ್ತಿ ಮೌಲ್ಯವು ರೂ. 641.93 ಕೋಟಿಯಿಂದ ರೂ. 980.77 ಕೋಟಿಗೇರಿದ್ದು—ರೂ. 338.84 ಕೋಟಿ-ಶೇಕಡಾ 53ರಷ್ಟು ಹೆಚ್ಚಳವಾಗಿರುವುದು ಒಂದು ಅದ್ಭುತ ದಾಖಲೆಯೇ ಆಗಿದೆ.

ಖಾಸಗೀ ರಂಗದಲ್ಲಿ ಬಂಡವಾಳಶಾಹಿಗಳ ಆಸ್ತಿ ಮೌಲ್ಯವು ಕೇವಲ 4 ವರ್ಷಗಳಲ್ಲಿ ಶೇಕಡಾ 45.8 ರಷ್ಟು ಹೆಚ್ಚಿದರೆ, 81 ಗುತ್ತೇದಾರಿ ಕುಟುಂಬಗಳ, 25 ದೊಡ್ಡ ಕುಟುಂಬಗಳ ಮತ್ತು ಬಿರ್ಲಾ ಮನೆತನ ಒಂದರ ಆಸ್ತಿ ಮೌಲ್ಯವು ಅನುಕ್ರಮವಾಗಿ ಶೇಕಡಾ 60. 63, 61.2 ಮತ್ತು 65 ರಷ್ಟು ಹೆಚ್ಚಿರುವುದರಿಂದ ದೇಶದ ಆರ್ಥಿಕ ಶಕ್ತಿಯೆಲ್ಲವೂ ಹೆಚ್ಚು ಹೆಚ್ಚಾಗಿ ಕೇಂದ್ರೀಕೃತವಾಗುತ್ತಿರುವುದನ್ನು ಗಮನಿಸಬಹುದು. 1972ರಲ್ಲಿ ರೂ. 100 ಕೋಟಿಗಿಂತ ಹೆಚ್ಚು ಆಸ್ತಿ ಮೌಲ್ಯವಿರುವ ಗುತ್ತೇದಾರಿ ಕೈಗಾರಿಕಾ ಕುಟುಂಬಗಳ ಸಂಖ್ಯೆ 11 ಆಗಿದ್ದರೆ, 1976 ರಷ್ಟರಲ್ಲಿ ಅವುಗಳ ಸಂಖ್ಯೆ 25ಕ್ಕೇರಿದೆ. ಟಾಟಾ ಮನೆತನದ ಲಾಭಗಳಿಕೆಯು ರೂ. 45.86 ಕೋಟಿಯಿಂದ ರೂ. 56.12 ಕೋಟಿಗೇರಿದರೆ, ಬಿರ್ಲಾ ಮನೆತನದ ಲಾಭಗಳಿಕೆಯು 45.86 ಕೋಟಿಯಿಂದ ರೂ. 118.84 ಕೋಟಿಗೇರಿದೆ, ಶೇಕಡಾ 160 ರಷ್ಟು ಹೆಚ್ಚಾಗಿದೆ. 1976ರಲ್ಲಿ ಟಾಟಾ ಮತ್ತು ಬಿರ್ಲಾ ಮನೆತನದ ಆಸ್ತಿ ಮೌಲ್ಯವು ಸಾಮಾನ್ಯವಾಗಿ ಸರಿಸಮಾನವಾಗಿದ್ದರೂ, ಬಿರ್ಲಾ ಮನೆತನದ ಲಾಭಗಳಿಕೆಯು ಟಾಟಾ ಮನೆತನದ ಲಾಭಗಳಿಕೆಗಿಂತ ಎರಡರಷ್ಟಕ್ಕಿಂತಲೂ ಹೆಚ್ಚಿರುವುದನ್ನು ಗಮನಿಸಬಹುದು. ಇದೇ ಅವಧಿಯಲ್ಲಿ, ಮಫತ್‌ಲಾಲ್, ಐ. ಸಿ. ಐ., ಲಾಲ್‌ಚಂದ್, ಮಹೀಂದ್ರ ಮತ್ತು ಮಹೀಂದ್ರ, ಹಿಂದುಸ್ಥಾನ್ ಲಿವರ್, ಕಸ್ತೂರಿಭ್ಯಾ ಲಾಲ್‌ಭ್ಯಾ, ಟಿ. ವಿ. ಎಸ್., ಬಾಟಾ (ಬಾಂಬೆ) ಕೈಗಾರಿಕಾ ಕುಟುಂಬಗಳ ಲಾಭವು ಇಮ್ಮಡಿಗೆ ಸಮೀಪವಾಗಿದೆ ಅಥವಾ ಅದಕ್ಕಿಂತಲೂ ಹೆಚ್ಚಾಗಿದೆ. ಕಿರ್ಲೋಸ್ಕರ್ ಮತ್ತು ಮಾಸ್‌ನೆಲ್ ಮತ್ತು ಮಾಗರ್ ಕುಟುಂಬಗಳ ಲಾಭವು 6-7 ಪಾಲು ಹೆಚ್ಚಿದೆ. ಭಿವರಡಿವಾಲಾ ಮತ್ತು ಲಾರೆನ್ಸ್ ಮತ್ತು ಟೌಬ್ರೊ ಕುಟುಂಬಗಳ ಲಾಭವು ಮೂರು ಪಟ್ಟಿಗೂ ಮಿಕ್ಕಿದೆ. ಭಿವರಡಿವಾಲಾ ಕುಟುಂಬದ ಆಸ್ತಿ ಮೌಲ್ಯವು ರೂ. 45.91 ಕೋಟಿಯಿಂದ ರೂ. 166.43 ಕೋಟಿಗೇರಿದ್ದು, ಶೇಕಡಾ 370 ರಷ್ಟು ಹೆಚ್ಚಳದ ಹೊಸ ದಾಖಲೆಯೇ ಆಗಿದೆ. ಶಿಂಘಾನಿಯಾ, ಇಂಡಿಯನ್ ಆಯಿಲ್, ಕಿರ್ಲೋಸ್ಕರ್, ವಾಲ್‌ಚಂದ್, ಮಹೀಂದ್ರ, ಮೋದಿ, ಸಾರಾಭಾಯ್ ಮಾಸ್‌ನಲ್ ಮತ್ತು ಟಿ.ವಿ.ಎಸ್. ಕುಟುಂಬಗಳ ಆಸ್ತಿ ಮೌಲ್ಯವು ಇಮ್ಮಡಿಗೆ ಸಮೀಪವಾಗಿದೆ ಅಥವಾ ಅದಕ್ಕಿಂತಲೂ ಹೆಚ್ಚಿದೆ.

1972-76ರ ಅವಧಿಯಲ್ಲಿ 81 ಗುತ್ತೇದಾರಿ ಕೈಗಾರಿಕಾ ಕುಟುಂಬಗಳ ಒಟ್ಟು ವ್ಯವಹಾರ ಮೌಲ್ಯವು (turn over) ಅತ್ಯಧಿಕವಾಗಿ ಹೆಚ್ಚಿದೆ. ಅವುಗಳಲ್ಲಿ ಬಿರ್ಲಾ, ಟಾಟಾ, ಆಯಿಲ್ ಇಂಡಿಯಾ, ಮಫತ್‌ಲಾಲ್, ಐ.ಸಿ.ಐ. ಮತ್ತು ಐ.ಟಿ.ಸಿ. ಕುಟುಂಬಗಳ ವ್ಯವಹಾರ ಮೌಲ್ಯಗಳು ಅನುಕ್ರಮವಾಗಿ, ರೂ. 532.04 ಕೋಟಿ, ರೂ. 445.44 ಕೋಟಿ, ರೂ. 263.92 ಕೋಟಿ, ರೂ. 182.39 ಕೋಟಿ, ಮತ್ತು ರೂ. 123 ಕೋಟಿಗಳಷ್ಟು ಹೆಚ್ಚಿವೆ.

ಗುತ್ತೇದಾರಿ ಕೈಗಾರಿಕಾ ಸಂಸ್ಥೆಗಳಿಂದ ನಿಯಂತ್ರಿಸಲ್ಪಡುತ್ತಿರುವ ಪತ್ರಿಕೆಗಳು ಸಾರ್ವಜನಿಕ ರಂಗದ ಕೈಗಾರಿಕಾ ಸಂಸ್ಥೆಗಳ ಆಸ್ತಿ ಮೌಲ್ಯವು 1972-76 ರ ಅವಧಿಯಲ್ಲಿ ರೂ. 5607 ಕೋಟಿಯಿಂದ ರೂ. 13,045 ಕೋಟಿಗೇರಿ, ಶೇಕಡಾ 132.7 ರಷ್ಟು ಹೆಚ್ಚಿದೆ ಎಂದು ಪ್ರತಿಸವಾಲು ಹಾಕುತ್ತಿವೆ. ಆದರೆ, ವಾಸ್ತವವಾಗಿ, 81 ಗುತ್ತೇದಾರಿ ಕುಟುಂಬಗಳ ಆಸ್ತಿ ಮೌಲ್ಯದ ಪಾಲು ಖಾಸಗೀ ರಂಗದ ಒಟ್ಟು ಆಸ್ತಿ ಮೌಲ್ಯದ ಶೇಕಡಾ 47.3 ರಿಂದ ಶೇಕಡಾ 52.1 ರಷ್ಟು ಹೆಚ್ಚಿರುವುದಾದರೆ, 25 ದೊಡ್ಡ ಗುತ್ತೇದಾರಿ ಕುಟುಂಬಗಳ ಆಸ್ತಿ ಮೌಲ್ಯದ ಪಾಲು ಶೇಕಡಾ 28.7 ರಿಂದ ಶೇಕಡಾ 31.7 ರಷ್ಟು ಹೆಚ್ಚಿದೆ. 1972ರಲ್ಲಿ ಈ 25 ದೊಡ್ಡ ಗುತ್ತೇದಾರಿ ಕುಟುಂಬಗಳ ಒಟ್ಟು ಆಸ್ತಿ ಮೌಲ್ಯವು ಖಾಸಗೀ ಮತ್ತು ಸಾರ್ವಜನಿಕ ರಂಗಗಳ ಒಟ್ಟು ಆಸ್ತಿ ಮೌಲ್ಯದ ಶೇ. 19.5 ಆಗಿದ್ದರೆ, ಅದು 1976ರಲ್ಲಿ ಶೇ. 18.0ಕ್ಕೆ ಇಳಿದಿದೆ, ಅಷ್ಟೆ. ಸಾರ್ವಜನಿಕ ರಂಗದ ಕೈಗಾರಿಕಾ ಸಂಸ್ಥೆಗಳ ಒಟ್ಟು ರೂ. 13,045 ಕೋಟಿ ಆಸ್ತಿ ಮೌಲ್ಯವು 1976ರಲ್ಲಿ ರೂ. 265 ಕೋಟಿ ಲಾಭ ಗಳಿಸಿರುವುದಾದರೆ, ಖಾಸಗೀ ರಂಗದ 25 ದೊಡ್ಡ ಗುತ್ತೇದಾರಿ ಕೈಗಾರಿಕಾ ಕುಟುಂಬಗಳ ಒಟ್ಟು ರೂ. 5476 ಕೋಟಿ ಆಸ್ತಿ ದೌಲ್ಯವು ರೂ. 455 ಕೋಟಿ ಲಾಭಗಳಿಸಿದೆ, ಅಂದರೆ ಶೇಕಡಾ 80ರಷ್ಟು ಹೆಚ್ಚು ಲಾಭ ಗಳಿಸಿದೆ ! ಇದರಿಂದಾಗಿ, ಸಾರ್ವಜನಿಕ ಕ್ಷೇತ್ರದಲ್ಲಿ ಬಂಡವಾಳ ಹೂಡುವುದರಿಂದ ಮತ್ತು ಅಲ್ಲಿನ ಲಾಭದಿಂದ ಖಾಸಗೀ ಕ್ಷೇತ್ರದ ಬಂಡವಾಳ ಹೂಡುವಿಕೆ ಅಥವಾ ಲಾಭಗಳಿಕೆಯು ಕಡಿಮೆಯಾಗುವುದೆಂಬ ವಾದವು ಹುರುಳಿಲ್ಲದೆಂದು ಸ್ಪಷ್ಟವಾಗುವುದು. ನಿಜ ಹೇಳುವುದಾದರೆ, ಬಂಡವಾಳಶಾಹಿ ಆರ್ಥಿಕ ಅಭಿವೃದ್ಧಿಯ ಮಾರ್ಗದಲ್ಲಿ, ಸಾರ್ವಜನಿಕ ರಂಗದಲ್ಲಿ ಹೆಚ್ಚು ಹೆಚ್ಚು ಬಂಡವಾಳ ಹೂಡುವುದರಿಂದ, ಅವುಗಳು ಕಡಿಮೆ ಲಾಭ ಗಳಿಸುವುದರಿಂದ ಅಥವಾ ನಷ್ಟ ಹೊಂದುವುದರಿಂದ ಖಾಸಗೀ ಕ್ಷೇತ್ರದ ಮುಖ್ಯವಾಗಿ ಗುತ್ತೇದಾರಿ ಕೈಗಾರಿಕಾ ಕುಟುಂಬಗಳ ಆಸ್ತಿ ಮೌಲ್ಯ, ವ್ಯವಹಾರ ಮೌಲ್ಯ ಹಾಗೂ ಲಾಭ ಗಳಿಕೆ ಹೆಚ್ಚುತ್ತಾ ಹೋಗುವುವು.

ಇಂದಿರಾ ಗಾಂಧಿಯ 'ಗರೀಬಿ ಹಟಾವೋ' ಘೋಷಣೆ ಮತ್ತು ತುರ್ತುಪರಿಸ್ಥಿತಿಯಲ್ಲಿನ '20 ಅಂಶಗಳ ಆರ್ಥಿಕ ಕಾರ್ಯಕ್ರಮಗಳು' ಬಡವರಿಗೆ

(ನೇ ಪುಟ ನೋಡಿ)

ಪ್ಲೀನಮ್ ಸಭೆಯಲ್ಲಿ ಸಂಘಟನೆಯ ಬಗ್ಗೆ ಅಂಗೀಕರಿಸಿದ ಗೊತ್ತುವಳಿ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

29. ರಾಜ್ಯ ಸಮಿತಿಗಳು ಕಳುಹಿಸಿರುವ ವರದಿಗಳ ಪರಿಶೀಲನೆಯಿಂದ, ಪ್ರತಿ ರಾಜ್ಯದಲ್ಲೂ ಪಕ್ಷವು ದಿನೇ ದಿನೇ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುತ್ತಿದೆಯೆಂಬುದು ಸ್ಪಷ್ಟವಾಗುತ್ತದೆ. ಆದರೆ ಸದಸ್ಯರು ಬಹು ಪ್ರಕಾರದ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ಇನ್ನೂ ಹೆಚ್ಚಿನ ರಾಜಕೀಯ ಮತ್ತು ಸಂಘಟನಾತ್ಮಕ ಪ್ರಗತಿಯನ್ನು ಸಾಧಿಸಲು ಒಳ್ಳೆಯ ವಾತಾವರಣ ಕಲ್ಪಿಸಲಾಗಿದೆ.

30. ಹಾಗೆಯೇ ಪಕ್ಷದ ರಾಜಕೀಯ ಮತ್ತು ಜನತೆಯ ಮೇಲಿನ ಪ್ರಭಾವಗಳ ಬೆಳವಣಿಗೆಯು, ಸಾಮೂಹಿಕ ಸಂಘಟನೆಗಳಲ್ಲೇ ಆಗಲಿ ಅಥವಾ ಪಕ್ಷದ ವಿಸ್ತರಣೆಯಲ್ಲೇ ಆಗಲಿ ಪ್ರತಿಬಿಂಬಿತವಾಗಿಲ್ಲವೆಂಬುದನ್ನೂ ಪರಿಶೀಲನೆ ತೋರಿಸುತ್ತದೆ.

31. ಇದರಿಂದ, ನಮ್ಮ ಪಕ್ಷವು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಅರ್ಧಾಂಶ ಬೆಳವಣಿಗೆಯ ಸಮಸ್ಯೆಗಳು ಎಂಬುದು ಅರ್ಥವಾಗುತ್ತದೆ. ದಿನನಿತ್ಯದ ಹೋರಾಟಗಳಲ್ಲಿ ನಮ್ಮನ್ನು ಮತ್ತು ನಮ್ಮ ಸಾಮೂಹಿಕ ಸಂಘಟನೆಗಳನ್ನು ಅನುಸರಿಸುವ ಅಸಂಖ್ಯಾತ ಜನತೆಯಲ್ಲಿ ನಾವು ಸದಸ್ಯರನ್ನು ಆಯ್ದು ಸೇರಿಸಿಕೊಳ್ಳುವುದು ಹೇಗೆ ಎಂಬುದೇ ಈ ಸಮಸ್ಯೆಯಾಗಿದೆ.

32. ಕೆಲವು ಸಂಘಟನಾತ್ಮಕ ಜಡತೆಗಳು ಮತ್ತು ಪಕ್ಷವನ್ನು ಕಟ್ಟುವ ಗುರಿಯ ನಿರ್ಲಕ್ಷ್ಯ ಇವುಗಳಲ್ಲದೆ, ದೈನಂದಿನ **ಹೋರಾಟದ** ಪ್ರಾಥಮಿಕ ಪ್ರಜ್ಞೆಯನ್ನು ರಾಜಕೀಯ ಮತ್ತು ಸಾಮಾಜಿಕ ಪ್ರಜ್ಞೆಯನ್ನಾಗಿ ಪರಿವರ್ತಿಸಬೇಕಾಗಿರುವುದೇ ಸಮಸ್ಯೆಯ ತಿರುಳಾಗಿದೆ. ಇದಕ್ಕೆ ಪಕ್ಷವು ತೀವ್ರವಾದ ಮತ್ತು ಅಪಾರವಾದ ರಾಜಕೀಯ ಚಟುವಟಿಕೆಯನ್ನು ಜನತೆಯ ನಡುವೆ ನಡೆಸಬೇಕು. ಅಲ್ಲದೆ ಇದಕ್ಕಿಂತ ಹೆಚ್ಚಾಗಿ, ಎಲ್ಲ ಊಳಿಗಮಾನ್ಯ, ಅರೆ ಊಳಿಗಮಾನ್ಯ, ಮಾರ್ಕ್ಸ್‌ವಾದಕ್ಕೆ ವಿರೋಧವಾಗಿರುವ ಎಲ್ಲ ಬೂರ್ಜ್ವಾ ಸಿದ್ಧಾಂತಗಳ ವಿರುದ್ಧ ನಿರಂತರ ಹೋರಾಟ ನಡೆಸಬೇಕು. ಈ ಕೆಲಸವನ್ನು ಕೇಂದ್ರ ಮತ್ತು ರಾಜ್ಯಸಮಿತಿಗಳೆರಡೂ ಕೈಗೊಳ್ಳಬೇಕು.

33. ಪಕ್ಷದ ಸಂಘಟನೆಯ ಇವತ್ತಿನ ಸ್ಥಿತಿಗೆ ನಮ್ಮ ಹಿಂದಿನ ಧೋರಣೆಗಳೇ ಕಾರಣ. ಪಕ್ಷದ ಸಂಘಟನಾತ್ಮಕ ನೀತಿಗಳು ಮತ್ತು ಪಕ್ಷದ ಕಾರ್ಯರೀತಿಯ ಬಗ್ಗೆ ಇರುವ ಪರಿಷ್ಕರಣವಾದಿ ಪ್ರವೃತ್ತಿಗಳ ವಿರುದ್ಧ ನಮ್ಮ ಹೋರಾಟ ಇನ್ನೂ ಮುಗಿದಿಲ್ಲ. ಇದರ ಫಲವಾಗಿ ನಮ್ಮ ಪಕ್ಷದ ಬೆಳವಣಿಗೆಯನ್ನು ಅಡ್ಡಿಪಡಿಸುವ ಅನೇಕ ಅಡ್ಡನೀತಿಗಳು ಹುಟ್ಟಿಕೊಂಡವು.

34. ಪ್ರಜಾಸತ್ತಾತ್ಮಕ ಕೇಂದ್ರವಾದವೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಂಘಟನೆಯ ಮೂಲಭೂತ ನಿಯಮ. ಈ ಮೂಲಭೂತ ನಿಯಮಕ್ಕೆ ದೃಢವಾದ ಬೆಂಬಲ ಕೊಡದಿದ್ದರೆ, ಕೇಂದ್ರವಾದದೊಡನೆ ಪಕ್ಷದ ಆಂತರಿಕ ಪ್ರಜಾಪ್ರಭುತ್ವವನ್ನು ಬೆಸೆಯಲು ಸಾಧ್ಯವಾಗದಿದ್ದರೆ, ಒಂದು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಕ್ಷವನ್ನು ಕಟ್ಟಲು ಆಗುವುದಿಲ್ಲ.

ಪಕ್ಷದ ಸಂಘಟನೆಯ ಈ ಮೂಲಭೂತ ಪರಿಕಲ್ಪನೆಯನ್ನು ಸ್ವತಂತ್ರ ಮನೋಭಾವವು ಅಡ್ಡಿಪಡಿಸುತ್ತದೆ. ಪಕ್ಷದ ಕಾರ್ಯಚಟುವಟಿಕೆಗಳಲ್ಲಿಯೂ ಕೂಡ ಅನೇಕ ವಿಧಗಳಲ್ಲಿ ಪ್ರಜಾಸತ್ತಾತ್ಮಕ ಕೇಂದ್ರವಾದವನ್ನು ವಿರೋಧಿಸಿ ಶಿಥಿಲಗೊಳಿಸಲಾಗಿದೆ.

35. ಪಕ್ಷದ ಪ್ರಜಾಸತ್ತಾತ್ಮಕ ಕಾರ್ಯವಿಧಾನವನ್ನು, ಪಕ್ಷದ ನೀತಿಯನ್ನು ರೂಪಿಸಿ ಚಾಲ್ತಿಗೆ ತರುವುದು ಎಲ್ಲರಿಗೆ ಸೇರಿದ ಜವಾಬ್ದಾರಿ ಎಂಬ ಭಾವನೆಯನ್ನು ತುಂಬ ಕೆಟ್ಟರೀತಿಯಲ್ಲಿ ಶಿಥಿಲಗೊಳಿಸಲಾಗಿದೆ. ಇದಕ್ಕೆ ಮುಖ್ಯ ಕಾರಣ ಎಂದರೆ, ಅನೇಕ ರಾಜ್ಯಗಳ ಸಮಿತಿಗಳು, ಕೆಳಹಂತದ ಘಟಕಗಳಿಗೆ ವರದಿಗಳನ್ನು ಕಳಿಸುವ ಮತ್ತು ಅವುಗಳಿಂದ ವರದಿಗಳನ್ನು ತರಿಸಿಕೊಳ್ಳುವ ಕೆಲಸವನ್ನು ಮಾಡದಿರುವುದು. ಕೆಳ ಘಟಕಗಳು ಎತ್ತುವ ಸಂದೇಹಗಳು ಮತ್ತು ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡುವ ರೂಢಿಯೇ ಇಲ್ಲವಾಗಿದೆ.

36. ಜನಸಮುದಾಯದ ಪ್ರಚಾರಗಳು ಮತ್ತು ಹೋರಾಟಗಳನ್ನು ಪುನರ್‌ವಿಮರ್ಶಿಸುವ ರೂಢಿಯೂ ಇಲ್ಲ, ಮತ್ತು ಅದರ ಚಟುವಟಿಕೆಗಳಿಂದಲೇ ಪಕ್ಷಕ್ಕೆ ಪಾಠಗಳನ್ನು ಕಲಿಸುವ ರೂಢಿಯೂ ಇಲ್ಲ.

37. ಇದರಿಂದ ಪಕ್ಷದ ಒಳಗೆ ವಿಮರ್ಶೆ ಮತ್ತು ಸ್ವವಿಮರ್ಶೆಗಳು ಇಲ್ಲದಂತೆ ಆಗುತ್ತದೆ. ತಿದ್ದಿಕೊಳ್ಳುವುದಕ್ಕೆ ಮತ್ತು ಪಕ್ಷದ ತಿಳುವಳಿಕೆ ಮತ್ತು ಕಾರ್ಯಾಚರಣೆಯನ್ನು ಸುಧಾರಿಸುವುದಕ್ಕೆ ಅಗತ್ಯವಾದ ಒಂದು ಮುಖ್ಯ ಆಯುಧವನ್ನು ಪಕ್ಷವು ಇದರಿಂದ ಕಳೆದುಕೊಂಡಂತಾಗುತ್ತದೆ.

38. ಕಾರ್ಯವಿಧಾನದ ಹಳೆ ಕ್ರಮಗಳನ್ನೇ ಬಳಸಿ ಪಕ್ಷವು ಬೆಳೆಯುತ್ತಿರುವುದು ಮತ್ತು ಕೆಲವುವೇಳೆ ರಾಜಕೀಯ ನಿರ್ಣಯಗಳನ್ನು ಪಾಲಿಸಲು ಅಸಮರ್ಥವಾಗಿರುವುದು-ಇವೆಲ್ಲವೂ ಸೇರಿ, ಪಕ್ಷದೊಳಗೆ ಅಧಿಕಾರಶಾಹಿಯನ್ನು ಬೆಳೆಸುತ್ತಿವೆ. ಪಕ್ಷದೊಳಗಿನ ಪ್ರಜಾಪ್ರಭುತ್ವವನ್ನು ಮೂಲೆಗೆ ಒತ್ತರಿಸುತ್ತಿವೆ.

39. ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಪಕ್ಷದ ಸದಸ್ಯರು ಸಾಮಾನ್ಯವಾಗಿ ಹಿಂಜರಿಯುತ್ತಿದ್ದಾರೆ.

40. ಈ ಅಂಶಗಳ ಜೊತೆಗೆ ಲಿಬರಲ್ ಮನೋಭಾವದ ಅಂಶವೂ ಸೇರಿ, ಶಿಸ್ತನ್ನು ಶಿಥಿಲಗೊಳಿಸುವುದನ್ನೂ ಕೂಡ ಬಲ್ಲ ಹೀನ ನಾಯಕತ್ವವು ಸುಮ್ಮನೆ ಸಹಿಸುವಂತಾಗಿದೆ. ಈ ಪರಿಸ್ಥಿತಿಯಲ್ಲಿ ಗುಂಪುಗಾರಿಕೆ ಪ್ರವೃತ್ತಿಗಳು ಬೆಳೆಯುತ್ತವೆ.

41. ಅನೇಕ ರಾಜ್ಯ ಮತ್ತು ಜಿಲ್ಲಾ ಸಮಿತಿಗಳಲ್ಲಿ ಸಾಮೂಹಿಕವಾಗಿ ಕೆಲಸಮಾಡುವುದನ್ನು ನಿಲ್ಲಿಸಲಾಗಿದೆ. ಕೆಲಸವನ್ನು ಹಂಚಿಕೊಳ್ಳದೆ ಇರುವುದರಿಂದ ಸಾಮೂಹಿಕವಾಗಿ ಕೆಲಸ ಮಾಡುವುದು ಸಾಧ್ಯವಾಗುವುದಿಲ್ಲ. ಇದರ ಫಲವಾಗಿ, ಅಧಿಕಾರವು ಕೆಲವರ ಕೈಯಲ್ಲೇ ಕೇಂದ್ರಿಕೃತವಾಗುತ್ತದೆ. ಇದರಿಂದ ವೈಯಕ್ತಿಕವಾಗಿ ಕೆಲಸ ಮಾಡುವುದು ಆರಂಭವಾಗುತ್ತದೆ. ಸೆಕ್ರೆಟೇರಿಯಟ್ ಜಾಗದಲ್ಲಿ ಕಾರ್ಯದರ್ಶಿಯೊಬ್ಬನೇ ಕೆಲಸಮಾಡುತ್ತಾನೆ. ರಾಜ್ಯಸಮಿತಿಯ ಜಾಗದಲ್ಲಿ ಸೆಕ್ರೆಟೇರಿಯಟ್ ಕೆಲಸ ನಡೆಸುತ್ತದೆ. ಇದರಿಂದ ರಾಜ್ಯ ಸಮಿತಿಯು ಒಂದು ಔಪಚಾರಿಕ ಅಂಗವಾಗಿ ಉಳಿಯುತ್ತದೆ. ಇದರ ಪರಿಣಾಮವಾಗಿ ಅಧಿಕಾರಶಾಹಿ ಬೆಳೆದು, ರಾಜಕೀಯ ತೀರ್ಮಾನಗಳಲ್ಲಿ ತಪ್ಪುಗಳು ಆಗುತ್ತವೆ.

42. ಪಕ್ಷಕ್ಕೆ ಒಂದು ವರ್ಗಸೌಷ್ಠವವನ್ನು ಕೊಡಲು ಯಾವ ರಾಜ್ಯ ಸಮಿತಿಯೂ ಗಂಭೀರ ಗಮನವನ್ನು ಕೊಟ್ಟಿಲ್ಲ.

43. ಪಕ್ಷದ ಪತ್ರಿಕೆಗಳ ಮತ್ತು ಅವುಗಳ ಸಂಪಾದಕೀಯ ಕೆಲಸವು ಸಾಮಾನ್ಯವಾಗಿ ವೈಯಕ್ತಿಕ ಕಾಮ್ರೇಡುಗಳ ಸ್ವತ್ತಾಗುತ್ತದೆ. ಅನೇಕ ಪ್ರಮುಖ ಕಾಮ್ರೇಡುಗಳು ಈ ಪತ್ರಿಕೆಗೆ ಲೇಖನಗಳನ್ನು ಬರೆಯುವುದಿಲ್ಲ. ಪಕ್ಷದ ಪತ್ರಿಕೆಗಳ ನಿರ್ವಹಣೆ ಮತ್ತು ಅವುಗಳಲ್ಲಿ ಬರಬೇಕಾದ ವಿಚಾರಗಳ ಬಗ್ಗೆ ಸಮಿತಿಗಳು ಸಾಮೂಹಿಕವಾಗಿ ಚರ್ಚಿಸುವುದಿಲ್ಲ.

44. ಸರ್ವಸದಸ್ಯರ ಸಭೆಯನ್ನು ಉದ್ದೇಶಿಸಿ ಸಾಮಾನ್ಯವಾಗಿ ಒಬ್ಬಿಬ್ಬರು ಕಾಮ್ರೇಡುಗಳೇ ಮಾತನಾಡುತ್ತಾರೆ. ಇದರಿಂದ ಸಾಮೂಹಿಕ ನಾಯಕತ್ವ ಶಿಥಿಲವಾಗುತ್ತದೆ.

45. ಸಾಮೂಹಿಕ ಸಂಘಟನೆಗಳು ಮತ್ತು ಹೋರಾಟಗಳ ಸಮಸ್ಯೆಗಳನ್ನು ಚರ್ಚಿಸುವುದರಲ್ಲಿ ಕೆಲವು ರಾಜ್ಯಗಳು ವಿಫಲವಾಗಿವೆ. ಇದರಿಂದ ಒಬ್ಬರಿಗೊಬ್ಬರು ಎದುರು ನಿಲ್ಲುವಂತಾಗುತ್ತದೆ. ಅಲ್ಲದೆ ಸಾಮೂಹಿಕ ಸಂಘಟನೆಗಳನ್ನು ಪ್ರಜಾಸತ್ತಾತ್ಮಕವಾಗಿ ನಡೆಸುವುದರಲ್ಲಿ ಸೋಲುಂಟಾಗಿದೆ. ಇದರಿಂದ ಸಾಮೂಹಿಕ ಸಂಘಟನೆಗಳಲ್ಲಿ ಅನುಭವ ಮತ್ತು ಹೊಸ ನಾಯಕತ್ವಗಳು ಬೆಳೆಯುವುದಕ್ಕೆ ಅಡ್ಡಿಯುಂಟಾಗುತ್ತದೆ. ಘಟಕಗಳು ಮತ್ತು ಘಟಕ ಸಮಿತಿಗಳ ಕಾರ್ಯಾಚರಣೆ, ಪಕ್ಷದ ಸಮಿತಿಗಳು ಇವೆಲ್ಲದರ ಉಸ್ತುವಾರಿಯನ್ನು ನೋಡಿಕೊಳ್ಳುವುದು - ಇವೆಲ್ಲವೂ ಇನ್ನೂ ಆಗಬೇಕಾಗಿದೆ. ಇದೆಲ್ಲದರ ಅಭಾವದಿಂದ ಪಕ್ಷವು ಸಾಮೂಹಿಕ ಸಂಘಟನೆಗಳಿಗೆ ಮಾರ್ಗದರ್ಶನ ಮಾಡುವುದರಲ್ಲಿ ಪರಿಣಾಮಹೀನವಾಗಿದೆ.

46. ಈಗ ಸದ್ಯದಲ್ಲಿ, ಸಂವಿಧಾನವು ರೂಪಿಸಿದ ಕೆಲವು ಕನಿಷ್ಠ ಕರ್ತವ್ಯಗಳನ್ನು ಕೂಡ ಪಕ್ಷದ ಅನೇಕ ಸಂಖ್ಯೆಯ ಸದಸ್ಯರು ಪಾಲಿಸುತ್ತಿಲ್ಲ. ಇದರಿಂದ ಪಕ್ಷವು ಒಂದು ಕ್ರಾಂತಿಕಾರಿ ಪಕ್ಷದ ಸತ್ವವನ್ನು ಕಳೆದುಕೊಂಡು ವ್ಯಕ್ತಿಗಳ ಒಂದು ಅವ್ಯವಸ್ಥಿತ ಗುಂಪಿನ ಮಟ್ಟಕ್ಕೆ ಇಳಿಯುತ್ತದೆ.

47. ಪಕ್ಷದ ಸದಸ್ಯತ್ವವನ್ನು ಮಿತಿಗೊಳಿಸುವುದು ಮತ್ತು ಒಂದು ಜನಸಮುದಾಯದ ಕ್ರಾಂತಿಕಾರಿ ಪಕ್ಷವನ್ನು ಕಟ್ಟಲು ಅದನ್ನು ವಿಸ್ತರಿಸುವುದನ್ನು ವಿರೋಧಿಸುವುದು ಎರಡೂ ತಪ್ಪು ಕಲ್ಪನೆಗಳೆಂದು ಪ್ಲೀನಮ್ ಅಭಿಪ್ರಾಯಪಡುತ್ತದೆ. ಕಾರ್ಯತಂತ್ರ ನೀತಿಯಲ್ಲಿರುವ ವಿಚಾರಗಳನ್ನು ಅನುಸರಿಸಿ ಪ್ಲೀನಮ್, ಒಂದು ಜನಸಮುದಾಯದ ಕ್ರಾಂತಿಕಾರಿ ಪಕ್ಷವಿಲ್ಲದಿದ್ದರೆ ಕಾರ್ಮಿಕ ವರ್ಗವು ಭಾರತದಲ್ಲಿ ಕ್ರಾಂತಿಯನ್ನು ಸಫಲಗೊಳಿಸುವುದು ಸಾಧ್ಯವಿಲ್ಲವೆಂದು ಅಭಿಪ್ರಾಯ ಪಡುತ್ತದೆ.

48. ಒಂದು ಜನ ತಳಹದಿಯ ಪಕ್ಷವು ಸಾಮಾನ್ಯವಾಗಿ ಒಂದು ಸಾಧಾರಣಾವಾದಿ ಸಮಾಜವಾದಿ-ಪ್ರಜಾಪ್ರಭುತ್ವವಾದಿ ಪಕ್ಷವಾಗಿರುತ್ತದೆ ಎಂಬ ಕಲ್ಪನೆ ಮತ್ತು ಅದು ಪಕ್ಷಕ್ಕೆ ಕೆಳಮಟ್ಟದ ಪ್ರಜ್ಞೆಯನ್ನು ತರುತ್ತದೆ ಎಂಬ ಅಭಿಪ್ರಾಯ ಇವೆರಡು ತಪ್ಪು ಕಲ್ಪನೆಗಳು.

49. ಜನಸಮುದಾಯದ ಕ್ರಾಂತಿಕಾರಿ ಪಕ್ಷಕ್ಕಾಗಿ ನಡೆಸುವ ಹೋರಾಟದಿಂದ, ಸದಸ್ಯರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಮುನ್ನ ಮತ್ತು ನಂತರ, ನಿರಂತರವಾಗಿ ಅವರ ಪ್ರಜ್ಞೆಯನ್ನು ಮೇಲಕ್ಕೊಯ್ಯುವ ಜವಾಬ್ದಾರಿ ಪಕ್ಷದ ಮೇಲೆ ಇರುತ್ತದೆ. ಸದಸ್ಯರ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಗುಣಮಟ್ಟವನ್ನು ಹೆಚ್ಚಿಸುವುದೂ ಕೂಡ ಪಕ್ಷದ ಕರ್ತವ್ಯವಾಗಿರುತ್ತದೆ. ಈ ಗುರಿಯನ್ನು ಸಾಧಿಸಬೇಕಾದರೆ, ಸದಸ್ಯತ್ವದ ವಿಸ್ತರಣೆ ಮತ್ತು ಪ್ರಜ್ಞೆಯನ್ನು ಉನ್ನತಗೊಳಿಸುವುದು, ಇವೆರಡನ್ನೂ ಜೊತೆಜೊತೆಯಾಗಿ ಮಾಡಬೇಕಾಗುತ್ತದೆ. ಜನತೆಯ **ಹೋರಾಟಗಳಲ್ಲಿ** ಉತ್ಸಾಹದಿಂದ ಭಾಗವಹಿಸಿದವರನ್ನು ಸಹಾಯಕ ಗುಂಪುಗಳಿಗೆ ಸೇರಿಸಿಕೊಂಡು ಸಂಘಟಿಸಬೇಕು. ಈ ಸಹಾಯಕ ಗುಂಪಿನ ಸದಸ್ಯರಿಗೆ ಶಿಕ್ಷಣದಿಂದ ತರಬೇತಿ ಕೊಟ್ಟು ಅವರನ್ನು ಪಕ್ಷದ ಸದಸ್ಯರನ್ನಾಗಿ ನೇಮಿಸಿಕೊಳ್ಳಬೇಕು.

ಪ್ರಜ್ಞೆಯನ್ನು ಮೇಲ್ಮಟ್ಟಕ್ಕೇರಿಸುವುದು ಎಂದಾಗ ಅದರಲ್ಲಿ ಅನೇಕ ಅಂಶಗಳು ಸೇರಿಕೊಳ್ಳುತ್ತವೆ. ಸಂವಿಧಾನವು ನೀಡಿದ ಕರ್ತವ್ಯಗಳನ್ನು ಪಕ್ಷದ ಸದಸ್ಯನೊಬ್ಬ ಸರಿಯಾಗಿ ಪಾಲಿಸುವಂತಾಗಬೇಕು. ಘಟಕದ ಶಿಸ್ತಿಗೆ ಅವನು ಒಳಪಟ್ಟಿರಬೇಕು. ಬಹುಮತಕ್ಕೆ ಅಲ್ಪಮತವು ತಲೆಬಾಗಬೇಕು ಎಂಬ ನಿಯಮವನ್ನು ಅಂಗೀಕರಿಸಬೇಕು. ಕೆಳಗಿನ ಸಮಿತಿಗಳು ಮೇಲಿನ ಸಮಿತಿಯ ತೀರ್ಮಾನಗಳನ್ನು ಒಪ್ಪಿಕೊಂಡು ಪಾಲಿಸಬೇಕು. ಆ ಘಟಕಗಳ ಮೂಲಕ ಪಕ್ಷದ ಸದಸ್ಯರು **ಶಿಸ್ತಿನಿಂದ** ಕೆಲಸ ಮಾಡಬೇಕು.

50. ತಪ್ಪು ಸೈದ್ಧಾಂತಿಕ ನಿಲುವಿನಿಂದ ಮತ್ತು ಸಂಘಟನಾತ್ಮಕ ವಿಚಾರಗಳಿಂದ ಪಕ್ಷದ ವಿಸ್ತರಣೆಯ ದಾರಿಯಲ್ಲಿ ಬರುವ ಅಡ್ಡಿಗಳನ್ನು ನಿವಾರಿಸಬೇಕೆಂದು ಪ್ಲೀನಮ್ ಅಭಿಪ್ರಾಯ ಪಡುತ್ತದೆ. ಪಕ್ಷವು ತನ್ನ ಸದಸ್ಯತ್ವವನ್ನು ವಿಸ್ತರಿಸಿಕೊಳ್ಳಬೇಕು ಮತ್ತು ಒಂದು ಜನ ಸಮುದಾಯದ ಕ್ರಾಂತಿಕಾರಿ ಪಕ್ಷವಾಗಿ ತಾನೂ ವಿಸ್ತಾರಗೊಳ್ಳಬೇಕು. ಈ ಸಂದರ್ಭದಲ್ಲಿ ವಿಸ್ತರಣೆಯ ಜೊತೆ ಸದಸ್ಯರ ಸೈದ್ಧಾಂತಿಕ ಮಟ್ಟವನ್ನು ಹೆಚ್ಚಿಸುವ ಕಾರ್ಯವನ್ನೂ ನಡೆಸಬೇಕು.

51. ಸದ್ಯದ ಅಪಾಯಕಾರಿ ಅನಿಶ್ಚಯತೆಗೆ ಒಂದು ಕೊನೆಯುಟ್ಟಿಸಬೇಕು, ಇಲ್ಲದಿದ್ದರೆ ಅದು ಬಲವತ್ತರವಾದ -ಕೇಂದ್ರೀಕೃತ ಪಕ್ಷದ ಕಲ್ಪನೆಯನ್ನೇ ಹಾಳುಮಾಡಿ ಶಿಥಿಲಗೊಳಿಸುತ್ತದೆ. ಕೇಂದ್ರೀಕೃತ ಪಕ್ಷವು ಮಾತ್ರ ಕಾರ್ಮಿಕ ವರ್ಗದ ಮುಂದಾಳತ್ವವನ್ನು ವಹಿಸಬಲ್ಲುದು ಎಂದು ಪ್ಲೀನಮ್ ನಿರ್ದೇಶಿಸುತ್ತದೆ.

52. ಜನತೆಯ ಚಳುವಳಿಗಳು ಮತ್ತು ಸಾಮೂಹಿಕ ಸಂಘಟನೆಗಳಿಗೆ ಮಾರ್ಗದರ್ಶನ ನೀಡುವ ಕೆಲಸವೂ ಸೇರಿದಂತೆ, ಪಕ್ಷದ ಎಲ್ಲ ಸೈದ್ಧಾಂತಿಕ, ತಾತ್ವಿಕ, ರಾಜಕೀಯ ಮತ್ತು ಸಂಘಟನಾತ್ಮಕ ಕರ್ತವ್ಯಗಳನ್ನು ನಿರ್ವಹಿಸಲು ಸಮರ್ಥವಾದ ಒಂದು ಪರಿಣಾಮಕಾರಿ ಕೇಂದ್ರವನ್ನು ಕಟ್ಟುವ ಕೆಲಸದ ಬಗ್ಗೆ ಆದ್ಯಗಮನ ನೀಡಬೇಕು.

53. ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿರುವ ಎರಡು ಪ್ರಮುಖ ಅಡ್ಡಮಾರ್ಗಗಳ ಜೊತೆ ತೀವ್ರವಾದ ಮತ್ತು ದೀರ್ಘವಾದ ಹೋರಾಟವನ್ನು ನಡೆಸಿ ಪಕ್ಷವು ಗಳಿಸಿರುವ ಸೈದ್ಧಾಂತಿಕ ಮತ್ತು ರಾಜಕೀಯ ಐಕ್ಯತೆಯನ್ನು ಮತ್ತಷ್ಟು ಬಗ್ಗೂಡಿಸುವ ಕೆಲಸವನ್ನು ಅಂಥ ಕೇಂದ್ರವು ಮಾತ್ರ ನಿರ್ವಹಿಸಬಲ್ಲುದು.

54. ಹೀಗೆಂದಾಗ, ಮೊದಲಿಗೆ ತನ್ನ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಸಹಾಯ ಮಾಡಬಲ್ಲ ಪರಿಣಾಮಕಾರಿ ಕಾರ್ಯಕರ್ತರ ದೊಡ್ಡ ಸಂಖ್ಯೆಯು ಕೇಂದ್ರದ ಕೈಕೆಳಗೆ ಇರಬೇಕಾಗುತ್ತದೆ. ಕೇಂದ್ರದ ಪತ್ರಿಕೆಯಾದ "ಪೀಪಲ್ಸ್ ಡೆಮಾಕ್ರಸಿ"ಯನ್ನು ನಡೆಸುವುದಕ್ಕೆ ಮತ್ತು ಕೇಂದ್ರದ ಇತರ ಚಟುವಟಿಕೆಗಳನ್ನು ನಡೆಸುವುದಕ್ಕೆ ಕಾರ್ಯಕರ್ತರ ಕೊರತೆಯಿದೆ. ರಾಜ್ಯಗಳು ಅದರಲ್ಲೂ ಬಲಿಷ್ಠವಾದ ರಾಜ್ಯಗಳು, ಕೇಂದ್ರದ ಕಾರ್ಯಕರ್ತರ ಅಗತ್ಯವನ್ನು ಪೂರೈಸುವ ಮುಖ್ಯ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು.

55. ಒಂದು ಪರಿಣಾಮಕಾರಿಯಾದ ಕೇಂದ್ರವು ಕೆಲಸ ಮಾಡಬೇಕಾದರೆ, ಹೆಚ್ಚು ಸಂಖ್ಯೆಯ ಪಾಲಿಟ್‌ಬ್ಯೂರೋ ಸದಸ್ಯರು ಈ ಕೇಂದ್ರದ ಕೆಲಸಕ್ಕೆ ತಮ್ಮನ್ನು ತಾವು ಮೀಸಲಿಟ್ಟುಕೊಳ್ಳಬೇಕು. ಕೇಂದ್ರದ ಕೆಲಸವನ್ನೇ ಮುಖ್ಯ ಜವಾಬ್ದಾರಿಯಾಗುಳ್ಳ ಅನೇಕ ಕೇಂದ್ರ ಸಮಿತಿ ಸದಸ್ಯರು ಅವರಿಗೆ ಸಹಾಯ ಮಾಡಬೇಕು.

56. ಇತ್ತೀಚಿನ ಅನುಭವಗಳ ಲಾಭ ಪಡೆದು, ಪಕ್ಷದ ಪ್ರಮುಖ ಅಂಗಗಳು ಕೇವಲ ಕೊನೆಯಿಲ್ಲದ ಚರ್ಚೆಗಳ ವೇದಿಕೆಗಳಾಗದಂತೆ ಮತ್ತು ಪರಿಶೀಲನೆಗೆ ಮುನ್ನ ಬಹುಸಂಖ್ಯಾತರ ತೀರ್ಮಾನಗಳಿಗೆ ಬೆಲೆಕೊಡುವಂತೆ, ಸಾಮೂಹಿಕವಾಗಿ ಖಚಿತಗೊಳಿಸಿಕೊಳ್ಳಬೇಕು.

57. ಸ್ವತಂತ್ರ ಮನೋಭಾವವನ್ನು ಹೊಡೆದೋಡಿಸಬೇಕಾದರೆ, ಮೊದಲಿಗೆ ಈಗ ಮೀರಲಾಗಿರುವ

ರೂಢಿಗಳು ಮತ್ತು ನಿಯಮಗಳನ್ನು ಶಿಸ್ತಿನಿಂದ ಅನುಸರಿಸುವುದು ಅಗತ್ಯ. ಆದರೆ ಇದರಿಂದಷ್ಟೆ ಕೆಲಸ ಆಗುವುದಿಲ್ಲ. ಕೇಂದ್ರವು ರಾಜ್ಯಗಳಿಗೆ ಮಾರ್ಗದರ್ಶನ ನೀಡುತ್ತಾ ನಿಜವಾದ ಕೇಂದ್ರವೆನಿಸಬೇಕು. ಈಗ ಸದ್ಯದಲ್ಲಿ ರಾಜ್ಯಗಳಲ್ಲಿ ಇರುವ ಎಲ್ಲ ಮುಖ್ಯ ಸಮಸ್ಯೆಗಳ ಬಗ್ಗೆ ಕೇಂದ್ರವು ಯಾವುದೇ ಮಾರ್ಗದರ್ಶನ ನೀಡದೆ, ಎಲ್ಲವನ್ನೂ ರಾಜ್ಯಸಮಿತಿಗಳ ತೀರ್ಮಾನಕ್ಕೆ ಬಿಟ್ಟುಬಿಟ್ಟಿದೆ.

58. ಇತರ ಸಿದ್ಧಾಂತಗಳು, ಧಾರ್ಮಿಕ ಅಸ್ಪಷ್ಟತಾವಾದಗಳು, ಪ್ರತ್ಯೇಕತಾವಾದ, ಜಾತಿಗಳ ಊಳಿಗಮಾನ್ಯ ಸಿದ್ಧಾಂತಗಳು, ಜಾತಿವಾದ, ರಾಷ್ಟ್ರೀಯ ಅಂಧಶ್ರದ್ಧೆ ಇವೆಲ್ಲದರ ವರ್ಗಮೂಲಗಳು ಮತ್ತು ವರ್ಗಪಾತ್ರವನ್ನು ಹೊರಗೆಡವಿ ಅವುಗಳ ವಿರುದ್ಧ ಸೈದ್ಧಾಂತಿಕ ಹೋರಾಟವನ್ನು ನಡೆಸುವುದು ಮತ್ತು ಅಂಥ ಹೋರಾಟಕ್ಕೆ ಮಾರ್ಗದರ್ಶನ ನೀಡುವುದು ಕೇಂದ್ರದ ವಿಶೇಷ ಜವಾಬ್ದಾರಿಯಾಗಿದೆ. ಜಾತಿ ಮತ್ತು ಮತೀಯ ಭಾವನೆಗಳನ್ನು ಬಳಸಿ ಸಾಮಾನ್ಯವಾಗಿ ಆಳುವ ವರ್ಗ ಮತ್ತು ಅದರ ಹಿಂಬಾಲಕಳು. ಜನತೆಯ ಗಮನವನ್ನು ಅಡ್ಡದಾರಿಗೆಳೆಯುವುದರಿಂದ ಮತ್ತು ಶ್ರಮಜೀವಿಗಳ ಐಕ್ಯತೆಯನ್ನು ಒಡೆಯುವುದರಿಂದ. ಜಾತಿ ಮತಗಳ ಸಿದ್ಧಾಂತ ವಿರುದ್ಧ ಹೋರಾಡುವುದು ತುಂಬ ಅಗತ್ಯವಾಗಿದೆ.

ಈ ಹೋರಾಟವನ್ನು ನಡೆಸಲು ಕೇಂದ್ರವು ರಾಜ್ಯಸಮಿತಿಗಳನ್ನು ಸಿದ್ಧಪಡಿಸಬೇಕು.

59. ದೀರ್ಘವಾದ ಹೋರಾಟದ ಮೂಲಕ ಗಳಿಸಿರುವ ಪಕ್ಷದ ಸೈದ್ಧಾಂತಿಕ ಮತ್ತು ರಾಜಕೀಯ ಐಕ್ಯತೆಯನ್ನು ಮತ್ತಷ್ಟು ಬಿಗಿಗೊಳಿಸುವುದು ಅಗತ್ಯವಾಗಿದೆ. ಪಕ್ಷದ ಸಂಘಟನೆಯ ಅನೇಕ ಹಂತಗಳಲ್ಲಿ ತೀವ್ರವಾದ ಸೈದ್ಧಾಂತಿಕ ಕೊರತೆಗಳು ಇದೆಯೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಇವನ್ನು ನಿವಾರಿಸಲು ಗಂಭೀರವಾದ ಪ್ರಯತ್ನಗಳನ್ನು ಮಾಡಬೇಕೆನ್ನುವುದೂ ನಿಜ. ಈ ಉದ್ದೇಶವನ್ನು ಸಾಧಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವೆಂದು ಪ್ಲೀನಮ್ ಭಾವಿಸುತ್ತದೆ :

60. (ಎ) ರಾಜ್ಯಗಳ ಶಾಲೆಗಳ ಶಿಕ್ಷಕರನ್ನು ತರಬೇತುಗೊಳಿಸಲು ಕ್ರಮಬದ್ಧವಾಗಿ ಪಕ್ಷದ ಶಾಲೆಗಳನ್ನು ನಡೆಸುವುದು.

(ಬಿ) ತಾವಿರುವ ಸಾಮೂಹಿಕ ಸಂಘಟನೆಗಳ ಬಗ್ಗೆ ಪಕ್ಷದ ನೀತಿಯನ್ನು ತಿಳಿಸಲು ಮತ್ತು ಪಕ್ಷದ ಮಾರ್ಗದರ್ಶನದಲ್ಲಿ ಸಾಮೂಹಿಕ ಸಂಘಟನೆಗಳನ್ನು ನಡೆಸುವುದನ್ನು ಕಲಿಸಲು ಕಾರ್ಮಿಕ ಸಂಘ, ಕಿಸಾನ್, ವಿದ್ಯಾರ್ಥಿಗಳು, ಯುವಕರು ಮತ್ತು ಮಹಿಳೆಯರ ಸಂಘಟನೆಗಳಲ್ಲಿರುವ ಕಾರ್ಯಕರ್ತರಿಗೆ ಶಾಲೆಗಳನ್ನು ತೆರೆಯುವುದು.

(ಸಿ) ಪಕ್ಷದ ಶಾಲೆಗಳಿಗೆಲ್ಲಕ್ಕೂ ಅನ್ವಯಿಸುವ ಒಂದು ಪಠ್ಯ ಕ್ರಮವನ್ನು ಕೇಂದ್ರವು ತಯಾರಿಸಬೇಕು.

(ಡಿ) ರಾಜಕೀಯ ಮತ್ತು ಸೈದ್ಧಾಂತಿಕ ಪ್ರಚಾರವನ್ನು ಹೆಚ್ಚಿಸಲು ಮತ್ತು ಪಕ್ಷದ ನೀತಿ ಮತ್ತು ಸಿದ್ಧಾಂತವನ್ನು ಒಯ್ಯುವ ಸಾಧನಗಳಾಗಿ ಪಕ್ಷದ ಪತ್ರಿಕೆಗಳು ಪರಿಣಾಮಕಾರಿಯಾಗುವಂತೆ ಮಾಡಲು, ವರ್ಷಕ್ಕೊಮ್ಮೆಯಾದರೂ, ಪಕ್ಷದ ಪತ್ರಿಕೆಗಳ ಸಂಪಾದಕರು ಮತ್ತು ಲೇಖಕರ ಸಭೆಯನ್ನು ಕರೆಯುವುದು.

(ಇ) ಸೈದ್ಧಾಂತಿಕ ಐಕ್ಯತೆಯನ್ನು ಬೆಳೆಸುವುದಕ್ಕಾಗಿ ಕೇಂದ್ರವು ತಾತ್ವಿಕ ಮತ್ತು ಸೈದ್ಧಾಂತಿಕ ನಿಯತಕಾಲಿಕೆಗಳನ್ನು ತರುತ್ತದೆ. ಈ ಸದ್ಯದ ಪರಿಸ್ಥಿತಿಯಲ್ಲಿ ಇದು ತುಂಬಾ ಅತ್ಯಗತ್ಯವಾಗಿದೆ.

(ಎಫ್). ಕಮ್ಯುನಿಸ್ಟ್ ಚಳುವಳಿಯ ಸೈದ್ಧಾಂತಿಕ ವಿವಾದಗಳಲ್ಲಿ ಮಧ್ಯೆ ಪ್ರವೇಶಿಸುವುದು, ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಸಮರ್ಥಿಸುವುದು ಮತ್ತು ಅಂತರರಾಷ್ಟ್ರೀಯ ಸೈದ್ಧಾಂತಿಕ ಬೆಳವಣಿಗೆಗಳ ಬಗ್ಗೆ ಸದಸ್ಯರಿಗೆ ಶಿಕ್ಷಣ ಕೊಡುವುದು ಇವೆಲ್ಲವೂ ಕೇಂದ್ರದ ಮೊದಲ ಕರ್ತವ್ಯಗಳಲ್ಲೊಂದು. ಸರಿಯಾದ ಸಮಯದಲ್ಲಿ ಮಧ್ಯೆ ಪ್ರವೇಶಿಸದಿದ್ದರೆ ಪಕ್ಷದ ಅಭಿಪ್ರಾಯವು ಕುಂಠಿತವಾಗುತ್ತದೆ. ಈ ಗುರಿಯನ್ನು ಸಾಧಿಸಲು ತಾತ್ವಿಕ ಪತ್ರಿಕೆಯು ಸಹಾಯ ಮಾಡುತ್ತದೆ.

(ಜಿ) ಕಾಲಕಾಲಕ್ಕೆ ಕೇಂದ್ರವು ಪ್ರಮುಖ ವಿಚಾರಗಳ ಬಗ್ಗೆ ರಾಷ್ಟ್ರೀಯ ಪ್ರಚಾರವನ್ನು ಕೈಗೊಳ್ಳಬೇಕು. ಪಕ್ಷವನ್ನು ಕಟ್ಟಲು ಮತ್ತು ಒಂದು ಪರಿಣಾಮಕಾರಿಯಾದ ಕೇಂದ್ರವು ಬೆಳೆಯಲು ರಾಷ್ಟ್ರೀಯ ಪ್ರಚಾರಗಳು ಮುಖ್ಯ ಸಹಾಯ ನೀಡುತ್ತವೆ ಎಂದು ಗಮನಿಸಬೇಕು.

61. 1964 ರ ನಂತರ ಸದಸ್ಯರಾದವರಿಗೆ ಶಿಕ್ಷಣ ಮತ್ತು ತರಬೇತಿಯನ್ನು ನೀಡಲು ವಿಶೇಷ ಕ್ರಮಗಳನ್ನು ಕೇಂದ್ರ ಮತ್ತು ರಾಜ್ಯಸಮಿತಿಗಳು ಕೈಗೊಳ್ಳಬೇಕು. ಇವರಿಗೆ ತುರ್ತು ಗಮನ ನೀಡುವುದು ಅಗತ್ಯವಾಗಿದೆ.

62. ಅಖಿಲ-ಭಾರತ ಪರಿಸ್ಥಿತಿಗೆ ಮತ್ತು ಮುಂದುವರೆದ ರಾಜ್ಯಗಳ ಸಮಸ್ಯೆಗೆ ಗಮನಕೊಡುವ ಹಾಗೆಯೇ ದುರ್ಬಲವಾಗಿರುವ ರಾಜ್ಯಗಳ ಮುಂದುವರಿಕೆಗೆ ಗಮನ ನೀಡುವ ಜವಾಬ್ದಾರಿಯನ್ನೂ ತೆಗೆದುಕೊಳ್ಳಬೇಕೆಂದು ಪ್ಲೀನಮ್ ಕೇಂದ್ರಕ್ಕೆ ಆದೇಶ ನೀಡುತ್ತದೆ. ಎಲ್ಲ ರಾಜ್ಯಗಳಿಂದಲೂ ಕಾಲಕಾಲಕ್ಕೆ ವರದಿ ಬರಬೇಕೆಂದು ಒತ್ತಾಯಿಸಿ, ಆ ವರದಿಗಳನ್ನು ಕೇಂದ್ರ ಸಮಿತಿ ಸಭೆಗಳಲ್ಲಿ ಚರ್ಚಿಸಬೇಕು. ರಾಜ್ಯಕ್ಕೆ ಇರುವ ವೈಶಿಷ್ಟಗಳು, ರಾಜ್ಯದಲ್ಲಿ ಪಕ್ಷಕ್ಕೆ ಇರುವ ಬಲಾಬಲಗಳನ್ನು ಗಮನಿಸಿ ಪ್ರತಿ ರಾಜ್ಯಕ್ಕೂ ಕಾರ್ಯಗಳ ಬಗ್ಗೆ ಒಂದು ಸರಿಯಾದ ಯೋಜನೆಯನ್ನು ರೂಪಿಸಬೇಕು. ಬಲಿಷ್ಠ ರಾಜ್ಯಗಳಿಗೆ ಮಾರ್ಗದರ್ಶನ ಮಾಡುವುದನ್ನು ಮುಂದುವರೆಸುತ್ತಾ, ಆ ರಾಜ್ಯಗಳ ಹಾದಿಯಲ್ಲೇ ಬರುವಹಾಗೆ ದುರ್ಬಲ ಘಟಕಗಳನ್ನು ಮುಂದಕ್ಕೆ ತರುವ ವಿಶೇಷ ಪ್ರಯತ್ನಗಳನ್ನು ಕೇಂದ್ರವು ಕೈಗೊಳ್ಳಬೇಕು.

63. ಹಿಂದಿ ಮಾತನಾಡುವ ಪ್ರದೇಶಗಳಿಗಿರುವ ರಾಜಕೀಯ ಪ್ರಾಮುಖ್ಯ ಮತ್ತು ಬೆಳವಣಿಗೆಗೆ ಅವುಗಳಲ್ಲಿ ಇರುವ ಒಳ್ಳೆಯ ಅಂಶಗಳನ್ನು ಇವುಗಳನ್ನು ಗಮನಿಸಿ, ವಿಶಾಲವಾದ ಹಿಂದಿ ಮಾತನಾಡುವ ಪ್ರದೇಶಗಳಿಗೆ ತಕ್ಷಣ ಗಮನ ನೀಡಬೇಕು. ಈ ರಾಜ್ಯಗಳ ಬಗ್ಗೆ ನಿರ್ಲಕ್ಷ್ಯ ತೋರಿದರೆ, ಅಖಿಲ ಭಾರತ ಚಳುವಳಿಗೆ ತುಂಬ ಪೆಟ್ಟಾಗುತ್ತದೆ. ಈ ಕರ್ತವ್ಯದ ಅಂಗವಾಗಿ ಕೇಂದ್ರವು (1) ಒಂದು ಹಿಂದಿ ವಾರಪತ್ರಿಕೆಯನ್ನು ಆರಂಭಿಸಬೇಕು (2) ಹಿಂದಿಯಲ್ಲಿ ಶಿಕ್ಷಕರು ಮತ್ತು ಕಾರ್ಯಕರ್ತರಿಗೆ ತರಗತಿಗಳನ್ನು ನಡೆಸಬೇಕು. (3) ಈ ರಾಜ್ಯಗಳಲ್ಲಿ ರಾಜಕೀಯ ಪ್ರಚಾರವನ್ನು ಕೈಗೊಳ್ಳಬೇಕು. (4) ಹಿಂದಿಯಲ್ಲಿ ಸೈದ್ಧಾಂತಿಕ ಸಾಹಿತ್ಯವನ್ನು ಬರೆದು ಹಂಚಬೇಕು.

64. ಅನೇಕ ನಮ್ಮ ಕಾರ್ಮಿಕ ಸಂಘ ಪ್ರಭಾವವು ಸಿ. ಐ. ಟಿ. ಯು. ಮೂಲಕ ಮಾತ್ರವಲ್ಲದೆ ಅನೇಕ ಕಾರ್ಖಾನೆಗಳು ಮತ್ತು ವಾಣಿಜ್ಯದ ಇತರ ಸಂಘಟನೆಗಳ ಮೂಲಕವೂ ಬೆಳೆದಿದೆ. ನಮ್ಮ ಅನೇಕ ಕಾಮ್ರೇಡರುಗಳು ದೊಡ್ಡ ಸಾಮೂಹಿಕ ಸಂಘಟನೆಗಳ ನಾಯಕತ್ವ ವಹಿಸಿದ್ದಾರೆ. ಅವರ ನಾಯಕತ್ವವು ಸಮರ್ಥವಾಗಿದ್ದು ಸಾವಿರಾರು ಜನರ ಬೆಂಬಲ ಪಡೆದಿದೆ.

ಆದರೂ ಈ ಸಂಘಟನೆಗಳಲ್ಲಿ ಪಕ್ಷ ಮತ್ತು ಪಕ್ಷದ ಸದಸ್ಯರು ಕಮ್ಯುನಿಸ್ಟ್ ಕಾರ್ಯವನ್ನು ಸಫಲವಾಗಿ ನಡೆಸಿದ್ದಾರೆಂದು ಹೇಳಲಾಗುವುದಿಲ್ಲ. ಈ ಸಂಘಟನೆಗಳು ಪಕ್ಷವು ಸರಿಯಾಗಿ ಕಮ್ಯುನಿಸ್ಟ್ ಕಾರ್ಯವನ್ನು ನಡೆಸಿಲ್ಲ. ಕಾರ್ಮಿಕಸಂಘ ಹೋರಾಟಗಳಿಂದ ಹುಟ್ಟುವ ಪ್ರಜ್ಞೆಯನ್ನು ಆರ್ಥಿಕವಾದದ ಹರಡುವಿಕೆಯನ್ನು ತಡೆವ ಉನ್ನತ ಸಮಾಜವಾದಿ ಪ್ರಜ್ಞೆಯನ್ನಾಗಿ ಎತ್ತರಿಸುವ ಕೆಲಸದಲ್ಲಿ ಪಕ್ಷವು ಸಫಲವಾಗಿಲ್ಲ.

65. ನಮ್ಮ ವಿದ್ಯಾರ್ಥಿ ಚಳುವಳಿಯಾದ ಎಸ್.ಎಫ್.ಐ. ಬಲಿಷ್ಠವಾಗಿ ಬೆಳೆದಿದೆ. ಎ.ಐ.ಎಸ್.ಎಫ್. ಅನ್ನು ಅದು ಮೀರಿಸಿ ಈಗ ನಾಲ್ಕು ಲಕ್ಷಗಳ ಸದಸ್ಯತ್ವ ಪಡೆದಿದೆ. ನಮ್ಮ ಯುವಕ ಮತ್ತು ಮಹಿಳಾ ಚಳುವಳಿಗಳು ಬೆಳೆಯುತ್ತಿವೆ.

66. ನಮ್ಮ ಕಿಸಾನ್ ಸಭೆಯು 23 ಲಕ್ಷಗಳಿಗೆ ಬೆಳೆದಿದೆ. ಆದರೆ ಶೇಕಡಾ 55ರಷ್ಟು ಸದಸ್ಯತ್ವವು ಪಶ್ಚಿಮ ಬಂಗಾಳವೊಂದರಿಂದಲೇ ಬಂದಿದೆ ಮತ್ತು ಪಶ್ಚಿಮ ಬಂಗಾಳ ಮತ್ತು ಕೇರಳಗಳಿಂದ ಶೇಕಡಾ 75 ರಷ್ಟು ಸದಸ್ಯತ್ವ ಪೂರ್ತಿಯಾಗುತ್ತದೆ ಎಂಬುದನ್ನು ನೆನೆಸಿಕೊಳ್ಳಬೇಕು. ನಿಂಬೈಯು ಆಂಧ್ರಪ್ರದೇಶ, ತಮಿಳುನಾಡು ಮತ್ತು ಪಂಜಾಬ್‌ಗಳಿಂದ ಬಂದಿದೆ.

ಕಾರ್ಮಿಕಸಂಘ ಚಳುವಳಿಯ ಹಾಗೆಯೇ ಕಿಸಾನ್ ಚಳುವಳಿಯಲ್ಲೂ ದೌರ್ಬಲ್ಯಗಳು ಇವೆ. ಸದ್ಯದ ಗಟ್ಟಿ ಬೇಡಿಕೆಗಳನ್ನು ನಿರ್ಲಕ್ಷಿಸುವುದು ಮತ್ತು ಮೂಲಭೂತ ಪ್ರಚಾರಕ್ಕೇ ಗಮನ ಕೊಡುವುದು. ಇತರ ಕಿಸಾನ್ ಸಂಘಟನೆಗಳೊಡನೆ ಒಗ್ಗಟ್ಟಾಗಿ ಕಾರ್ಯಾಚರಣೆ ನಡೆಸುವುದರ ಪ್ರಾಮುಖ್ಯವನ್ನು ಅರಿಯಲು ವಿಫಲವಾಗುವುದು, ಸೈದ್ಧಾಂತಿಕ ಪ್ರಚಾರವನ್ನು ಕೈಗೊಳ್ಳದಿರುವುದು—ಈ ಕೆಲವು ದೌರ್ಬಲ್ಯಗಳನ್ನು 1976 ರ ಕೇಂದ್ರ ಸಮಿತಿ ಗೊತ್ತುವಳಿಯು ಗುರುತಿಸಿತ್ತು. ಈ ದೌರ್ಬಲ್ಯಗಳನ್ನು ನಿವಾರಿಸಿಕೊಳ್ಳಲು ನಮ್ಮ ಕಿಸಾನ್ ಸಭಾ ಕಾರ್ಯಕರ್ತರು ಪ್ರಯತ್ನಿಸುತ್ತಿದ್ದಾರೆ.

ಸಾಮೂಹಿಕ ಸಂಘಟನೆಗಳು ಪ್ರಜಾಸತ್ತಾತ್ಮಕವಾಗಿ ಕೆಲಸಮಾಡುವುದರ ಬಗ್ಗೆ ನಮಗಿರುವ ಕಲ್ಪನೆಯು ದೋಷಯುಕ್ತವಾಗಿದ್ದು ಅನೇಕ ವೇಳೆ ಗುಂಪುಗಾರಿಕೆಯಿಂದ ಕೂಡಿದೆ. ಸಾಮೂಹಿಕ ಸಂಘಟನೆಗಳು ಪಕ್ಷದ ಅಂಗಗಳೇನೋ ಎನ್ನುವ ಹಾಗೆ ಅನೇಕ ಸಮಿತಿಗಳು ಮತ್ತು ಕಾರ್ಯಕರ್ತರು ವರ್ತಿಸುತ್ತಾರೆ. ಪ್ರಜಾಸತ್ತಾತ್ಮಕವಾಗಿ ಅವು ಕೆಲಸ ಮಾಡುವುದರ ಬಗ್ಗೆ ಅಲ್ಪ ಗಮನ ಕೊಡುತ್ತಾರೆ. ಅಲ್ಲದೆ ಇನ್ನೊಂದು ಅಪಾಯಕಾರಿ ಧೋರಣೆಯಿರುವ ಸೂಚನೆಯೂ ಇದೆ. ಸಾಮೂಹಿಕ ಸಂಘಟನೆಗಳ ನೇತೃತ್ವ ವಹಿಸಿರುವ ಪಕ್ಷದ ಅನೇಕ ಸದಸ್ಯರು ಪಕ್ಷವನ್ನು ಮೀರಿ, ಅವುಗಳು ಸ್ವತಂತ್ರವಾಗಿ ಕೆಲಸಮಾಡುವಂತೆ ಮಾಡುತ್ತಾರೆ.

67. ಕೇಂದ್ರ ಸಮಿತಿಯು ಸಾಮೂಹಿಕ ಸಂಘಟನೆಗಳ ಸಮಸ್ಯೆಗಳು, ಅವುಗಳ ಅಖಿಲ ಭಾರತ ಅನುಭವ, ಕಾರ್ಯತಂತ್ರ ಇವುಗಳನ್ನು ಕಾಲಕಾಲಕ್ಕೆ ಚರ್ಚಿಸಿ ಅವುಗಳಿಗೆ ಪರಿಣಾಮಕಾರಿಯಾದ ಮಾರ್ಗದರ್ಶನವನ್ನು ನೀಡದಿದ್ದರೆ, ದೌರ್ಬಲ್ಯಗಳ ನಿವಾರಣೆಯಾಗಿ ಸಂಘಟನೆಗಳು ಪ್ರಗತಿ ಹೊಂದಲು ಸಾಧ್ಯವಾಗುವುದಿಲ್ಲ. ಇದು ಪಕ್ಷದ ಕೇಂದ್ರದ ಒಂದು ದೌರ್ಬಲ್ಯವಾಗಿದ್ದು, ಇದು ನಿವಾರಣೆಯಾಗಲೇಬೇಕು. ರಾಜ್ಯಸಮಿತಿಗಳಿಗೂ ಈ ಜವಾಬ್ದಾರಿ ಸೇರಿಯೇ ಇದೆ. ಅಲ್ಲದೆ, ಸಾಮೂಹಿಕ ಸಂಘಟನೆಗಳು ಪ್ರಜಾಸತ್ತಾತ್ಮಕವಾಗಿ ಕಾರ್ಯನಡೆಸುವ ಹಾಗೆ ಮಾಡುವುದೂ ಕೇಂದ್ರ ಮತ್ತು ರಾಜ್ಯ ಸಮಿತಿಗಳಿಗೆ ಸೇರಿದೆ. ಪಕ್ಷವು ಸಾಮೂಹಿಕ ಸಂಘಟನೆಗಳ ಸಂಬಂಧದಲ್ಲಿ ವಹಿಸುವ ಮಾರ್ಗದರ್ಶಕ ಪಾತ್ರವನ್ನು ಸರಿಯಾಗಿ ನಿರ್ವಹಿಸಬೇಕಾದರೆ ಸಣ್ಣ ಸಮಿತಿಗಳ ಕೆಲಸದ ಬಗ್ಗೆ ಉಸ್ತುವಾರಿಯಾಗಿ ನೋಡಿಕೊಳ್ಳಬೇಕು.

68. ಸಂಸತ್ತಿನ ಗುಂಪು ಸರಿಯಾಗಿ ಕೆಲಸಮಾಡುವ ಹಾಗೆ ಕೇಂದ್ರವು ನೋಡಿಕೊಳ್ಳಬೇಕು. ಸಂಸತ್ತನ್ನು ಒಂದು ಪರಿಣಾಮಕಾರಿ ರಾಜಕೀಯ ವೇದಿಕೆಯನ್ನಾಗಿ ಬಳಸಿಕೊಳ್ಳದಿದ್ದರೆ ನಮ್ಮ ಸಂಸತ್ ಚಟುವಟಿಕೆಗಳು ಶಿಥಿಲವಾಗುತ್ತವೆ.

ವಿಧಾನಸಭೆಗಳಲ್ಲಿ ಕಮ್ಯುನಿಸ್ಟರಾದ ನಮ್ಮ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸಿ, ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ, ನಮ್ಮ ಸಂಸತ್ ಸದಸ್ಯರು ಮತ್ತು ವಿಧಾನ ಸಭಾ ಸದಸ್ಯರಿಗೆ ಸರಿಯಾದ ತಯಾರಿ ಮತ್ತು ಗಮನವನ್ನು ಕೊಡಬೇಕು. ಇದನ್ನು ಸಾಮಾನ್ಯವಾಗಿ ನಿರ್ಲಕ್ಷಿಸಲಾಗಿದೆ. ನಮ್ಮ ಅನೇಕ ಸಂಸತ್ ಸದಸ್ಯರು ಸಂಸತ್ತಿಗೆ ಏನೂ ಗಮನ ಕೊಡುವುದಿಲ್ಲ. ಅನೇಕ ಮುಖ್ಯ ಅಧಿವೇಶನಗಳಿಗೆ ತಪ್ಪಿಸಿಕೊಳ್ಳುತ್ತಾರೆ. ಇದು ಬದಲಾಗಬೇಕು. ತಮ್ಮ ಸಂಸತ್ ಜವಾಬ್ದಾರಿಗಳನ್ನು ನಿರ್ವಹಿಸುವುದರಲ್ಲಿ, ಸಂಸತ್ ಸದಸ್ಯ ಸಂಪೂರ್ಣವಾಗಿ ಕೇಂದ್ರದ ಶಿಸ್ತಿಗೆ ಒಳಪಟ್ಟಿರಬೇಕು.

69. ನಮ್ಮ ಚಳುವಳಿಯನ್ನು ಕಮ್ಯುನಿಸ್ಟ್ ಪಥದಲ್ಲಿ ಮುನ್ನಡೆಸಲು ರಾಜ್ಯ ವಿಧಾನಸಭೆಗಳನ್ನು ವೇದಿಕೆಗಳನ್ನಾಗಿ ಬಳಸಿಕೊಳ್ಳುವಂತೆ ಮತ್ತು ನಮ್ಮ ವಿಧಾನಸಭಾ ಸದಸ್ಯರು ತಮಗೆ ಇತ್ತ ಕರ್ತವ್ಯಗಳನ್ನು ಪಾಲಿಸುವಂತೆ ಮತ್ತು ಶಾಸನ ಸಭೆಗಳಲ್ಲಿ ತಮ್ಮ ಕರ್ತವ್ಯಗಳನ್ನು ಪಾಲಿಸಲು ಕಾಲ ಮತ್ತು ಗಮನವನ್ನು ಮೀಸಲಿಡುವಂತೆ ರಾಜ್ಯ ಸಮಿತಿಗಳು ನೋಡಿಕೊಳ್ಳಬೇಕು.

70. ಪೂರ್ಣಾವಧಿ ಕಾರ್ಯಕರ್ತರ ಗುಂಪನ್ನು ಸರಿಯಾಗಿ ಗಮನಿಸಬೇಕಾದ ಅಗತ್ಯವಿದೆ. ಅವರ ವೇತನಗಳನ್ನು ಹೆಚ್ಚಿಸಬೇಕಾಗಿದೆ. ಪಕ್ಷವನ್ನು ಕಟ್ಟುವ ಮತ್ತು ವಿಸ್ತರಿಸುವ ಕೆಲಸದ ಅಂಗವಾಗಿ, ಯುವಕ ಕಾರ್ಯಕರ್ತರು ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಜವಾಬ್ದಾರಿ ಸ್ಥಾನಗಳಿಗೆ ಏರುವಂತೆ ಶೀಘ್ರವಾಗಿ ಬಡ್ತಿ ನೀಡುವುದು ಎಲ್ಲ ಸಮಿತಿಗಳ ಕರ್ತವ್ಯವಾಗಿದೆ. ಪಕ್ಷಕ್ಕೆ ಮತ್ತು ಕ್ರಾಂತಿಗೆ ದುಡಿಯುವ ನಿಷ್ಠಾವಂತ ಪೂರ್ಣಾವಧಿ ಕಾರ್ಯಕರ್ತರ ಪಡೆಯಿಲ್ಲದಿದ್ದರೆ ಪಕ್ಷವು ತನ್ನ ಚಾರಿತ್ರಿಕ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗಿದೆ.

71. ಸ್ವಯಂ ಬೆಳವಣಿಗೆಗೆ ಅವಕಾಶಗಳನ್ನೆ ಹೊಂದಿರದಿದ್ದ ಕೆಲಸಗಾರರ ವರ್ಗ ಮತ್ತು ಇತರ ಶ್ರಮಿಕ ವರ್ಗಗಳಿಂದ ಬರುವ ಯುವಕ ಕಾರ್ಯಕರ್ತರ ಸೈದ್ಧಾಂತಿಕ ಅಗತ್ಯಗಳು ಮತ್ತು ಬೆಳವಣಿಗೆಗೆ ಗಮನ ನೀಡಬೇಕು. ಬೆಳವಣಿಗೆಗೆ ಸರಿಯಾದ ಗಮನ ಹರಿಸದಿರುವುದರಿಂದ ಒಂದೇ ರೀತಿಯ ಕೆಲಸದಲ್ಲಿ ನಿರತರಾಗಿ ಕಾರ್ಯಕರ್ತರು ಬಹುಸಂಖ್ಯೆಯಲ್ಲಿ ನಿಷ್ಕ್ರಿಯರಾಗುವುದನ್ನು ತಪ್ಪಿಸುವ ಅಗತ್ಯವಿದೆ.

72. ತಮ್ಮಲ್ಲಿರುವ ಗುಂಪುಗಾರಿಕೆ ಮನೋಭಾವವನ್ನು ತೊಡೆದುಹಾಕುವಸಲುವಾಗಿ ರಾಜ್ಯಸಮಿತಿಗಳು ಹೋರಾಡಬೇಕು. ಕಾಲಕಾಲಕ್ಕೆ ಕೇಂದ್ರಕ್ಕೆ ವರದಿಗಳನ್ನು ಕಳುಹಿಸಿ, ಪಕ್ಷದ ಸಂವಿಧಾನದಲ್ಲಿ ಹೇಳಿದ ನಿಯಮಗಳು ಮತ್ತು ರೂಢಿಗಳನ್ನು ಅನುಸರಿಸಿ. ಒಂದು ಪರಿಣಾಮಕಾರಿ ಕೇಂದ್ರವನ್ನು ಕಟ್ಟುವುದರಲ್ಲಿ ರಾಜ್ಯಸಮಿತಿಗಳು ಸಹಾಯಮಾಡಬೇಕು.

73. ಪಕ್ಷದ ಒಳಗೆ ಪ್ರಜಾಸತ್ತೆಯನ್ನು ಮತ್ತು ಅಭಿಪ್ರಾಯಗಳ ವಿನಿಮಯವನ್ನು ಖಚಿತಗೊಳಿಸುವುದಕ್ಕೆ ಮತ್ತು ಪಕ್ಷದ ನೀತಿಗಳನ್ನು ರೂಪಿಸುವುದರಲ್ಲಿ ಭಾಗವಹಿಸುತ್ತಿರುವ ಭಾವನೆಯು ಸದಸ್ಯರಲ್ಲಿ ಮೂಡುವುದಕ್ಕೆ ಎಲ್ಲಾ ಹಂತಗಳಲ್ಲಿಯೂ, ಮೇಲಿನಿಂದ ಮತ್ತು ಕೆಳಗಿನಿಂದ ವರದಿಗಳನ್ನು ಕಳುಹಿಸುವುದು-ತರಿಸಿಕೊಳ್ಳುವುದು ಸಾಮಾನ್ಯ ರೂಢಿಯಾಗಬೇಕು.

74. ಪಕ್ಷದ ಒಳಗೆ ಪ್ರಜಾಸತ್ತೆ

(೬ನೇ ಪುಟ ನೋಡಿ)

ಕೇರಳ ಪತ್ರ

ಕೆ.ಎಸ್.ವೈ.ಎಫ್. ರಾಜ್ಯ ಸಮ್ಮೇಳನ, ತಲಚೇರಿಯಲ್ಲಿ

ಒಂದು ಲಕ್ಷ ಯುವಜನತೆಯ ಮೆರವಣಿಗೆ

ವೈಜ್ಞಾನಿಕ ಸಮಾಜವಾದದ ಪ್ರಚಾರಕ್ಕಾಗಿ ಹಾಗೂ ಮೂಢನಂಬಿಕೆ, ಭ್ರಷ್ಟಾಚಾರ, ಜಾತಿವಾದದ ವಿನಾಶಕ್ಕಾಗಿ ಸತತವಾಗಿ ಹೋರಾಡುತ್ತಿರುವ "ಕೇರಳ ಸೋಷಲಿಸ್ಟ್ ಯೂತ್ ಫೆಡರೇಷನ್ನಿನ" ರಾಜ್ಯಸಮ್ಮೇಳನ ಮಾರ್ಚ್ 2, 3 ಮತ್ತು 4 ರಂದು ತಲಚೇರಿಯಲ್ಲಿ ನಡೆಯಿತು. ಕಾಂ. ಪಾಟ್ಯಂ ಗೋಪಾಲನ್ ನಗರದಲ್ಲಿ ನಡೆದ ಈ ಸಮ್ಮೇಳನಕ್ಕೆ ರಾಜ್ಯದ ವಿವಿಧ ಭಾಗಗಳಿಂದ 500 ಪ್ರತಿನಿಧಿಗಳು ಭಾಗವಹಿಸಿದ್ದರು. ಸಮ್ಮೇಳನದ ಅಂಗವಾಗಿ ಕೊನೆಯ ದಿನ ನಡೆದ ಅಪೂರ್ವ ಮೆರವಣಿಗೆ ಹಾಗೂ ಬಹಿರಂಗ ಸಭೆ ಸರ್ವಾಧಿಕಾರಿ ಶಕ್ತಿಗಳಿಗೆ ಮತ್ತು ಪರಿಷ್ಕರಣವಾದಿಗಳಿಗೆ ಎಚ್ಚರಿಕೆಯ ರೂಪದಲ್ಲಿತ್ತು.

ಸಮ್ಮೇಳನದ ಅಂಗವಾಗಿ ಕಣ್ಣಾನೂರು, ವಯನಾಡ್ ಮತ್ತು ಕಲ್ಲಿಕೋಟೆ ಜಿಲ್ಲೆಗಳಿಂದ ಆಗಮಿಸಿದ ಇಪ್ಪತ್ತೈದು ಸಹಸ್ರ ಸ್ವಯಂಸೇವಕರು ಬಿಳಿ ನಕ್ಷತ್ರಾಂಕಿತ, ಸಹಸ್ರ ಸಹಸ್ರ ಕೆಂಬಾವುಟಗಳನ್ನು ಹಿಡಿದುಕೊಂಡು ಒಂದು ಲಕ್ಷಕ್ಕೂ ಮೇಲ್ಪಟ್ಟು ಭಾಗವಹಿಸಿದ್ದ ಯುವಕ, ಯುವತಿಯರಿಗೆ ಮೆರವಣಿಗೆಯ ಮಾರ್ಗದರ್ಶನ ನೀಡಿದರು. ಮೆರವಣಿಗೆಯ ನೇತೃತ್ವವನ್ನು ಕಾಂ. ಪಾಟ್ಯರಾಜನ್, ಇ.ವಿ. ಜಯರಾಜನ್, ಟಿ.ವಿ. ದಾಸನ್, ಎಂ.ವಿ. ಗೋವಿಂದನ್ ಹಾಗೂ ಸಿ.ವಿ. ಅಜೀರ್ ವಹಿಸಿದ್ದರು.

ಐತಿಹಾಸಿಕ ದಾಖಲೆ:

ಕೇವಲ ಮೂರು ಜಿಲ್ಲೆಗಳನ್ನು ಮಾತ್ರ ಕೇಂದ್ರೀಕರಿಸಿ ನಡೆಸಿದ ಮೆರವಣಿಗೆ, ಒಂದು ನಿಶ್ಚಿತ ಸ್ಥಳವನ್ನು ದಾಟಲು ಏಳು ಗಂಟೆಗಳನ್ನು ತೆಗೆದುಕೊಂಡಿತೆಂದರೆ, ಮೆರವಣಿಗೆಯ ಪ್ರವಾಹವನ್ನು ಊಹಿಸಬಹುದು. ಇದು ತಲಚೇರಿಯಲ್ಲಿ ಈ ಹಿಂದೆ ನಡೆದ ಎಲ್ಲಾ ಬೃಹತ್ ಜಾಥಾಗಳ ದಾಖಲೆ ಮುರಿದ ಐತಿಹಾಸಿಕ ಮೆರವಣಿಗೆಯಾಗಿತ್ತು. ಜಾಥಾದಲ್ಲಿ ಭಾಗವಹಿಸಿದವರನ್ನು ಕರೆತಂದ ವಾಹನಗಳನ್ನು ನಿಲ್ಲಿಸಲು ತಲಚೇರಿಯ ಸುತ್ತಲ ಪ್ರದೇಶ ಸಾಕಾಗಲಿಲ್ಲ. ತಲಚೇರಿಯಿಂದ ಅತಿ ದೂರದಲ್ಲಿರುವ ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ದುರ್ಬಲ ಕೇಂದ್ರವಾದ ಕಾಸರಗೋಡಿನಿಂದಲೇ 38 ಬಸ್ಸುಗಳು ಬಂದಿದ್ದವೆಂದರೆ, ಸಮ್ಮೇಳನದ ಬೃಹದತೆಯನ್ನು ಊಹಿಸಬಹುದು. ಬಹುಪಾಲು ಮಲೆಯಾಳಂ ಘೋಷಣೆಗಳ ಮಧ್ಯೆ ಕನ್ನಡ, ಮತ್ತು ತುಳು ಭಾಷೆಯ ಆವೇಶದ ಘೋಷಣೆಗಳು ಜನತೆಯ ಮನ ಸೆಳೆದವು.

ದುಡಿಯುವ ವರ್ಗದ ಧೀರ ಸೇನಾನಿಯಾಗಿದ್ದ ಕಾಂ. ಎ.ಕೆ.ಜಿ., ಸಿ.ಎಚ್. ಕನಾರನ್, ಅಝಿಕೋಡನ್ ರಾಘವನ್ ಮೊದಲಾದವರ ವೀರ ಸ್ಮರಣೆಗಾಗಿ 24 ಕಡೆಗಳಲ್ಲಿ ಕಟ್ಟಿಸಿದ ಕಮಾನುಗಳನ್ನು ಹಾದು ಹೋಗುವಾಗ ವಿವಿಧ ಮಜೂರ ಸಂಘಟನೆಗಳು, ವಿಪ್ಲವ ಘೋಷಣೆಗಳನ್ನು ಕೂಗಿದ್ದಲ್ಲದೆ, ಸಿಡಿಮದ್ದುಗಳ ಆರ್ಭಟದೊಂದಿಗೆ ಸಂಗಾತಿಗಳಿಗೆ ಜಯಕಾರಗಳನ್ನು ಹಾಕಿದರು. ಮಾರ್ಕ್ಸ್, ಲೆನಿನ್, ಏಂಗಲ್ಸ್, ಸ್ಟಾಲಿನ್, ಎ.ಕೆ.ಜಿ. ಮೊದಲಾದವರ ಭಾವಚಿತ್ರಗಳಿಂದಲೂ, ಕುಡುಗೋಲು - ಸುತ್ತಿಗೆ - ನಕ್ಷತ್ರವನ್ನು ಹಿಡಿದ ಟಾಬ್ಲೋಗಳಿಂದಲೂ ಕೂಡಿದ ಶಿಸ್ತುಬದ್ಧ ಮೆರವಣಿಗೆ, ಅಲೆ ಅಲೆಯಾಗಿ ಸ್ಟೇಡಿಯಂ ತಲುಪಿದಾಗ ಆಗಲೇ ಪಕ್ಷದ ಕಟ್ಟಡಗಳು ಹಾಗೂ ಖಾಲಿ ಜಾಗವನ್ನು ಲಕ್ಷ, ಲಕ್ಷ ಜನ ತುಂಬಿದ್ದರು.

ಚಂಡೆ ಮುಂತಾದ ವಾದ್ಯಗಳಿಂದಲೂ, ವಿವಿಧ ಪ್ರದೇಶಗಳ ಬ್ಯಾನರುಗಳ ಹಿಂದೆ ಸಹಸ್ರ ಸಹಸ್ರ ಕಂಠಗಳು ನೀಡಿದ ಕ್ರಾಂತಿಕಾರಿ ಘೋಷಣೆಗಳು ಜನತೆಯನ್ನು ರೋಮಾಂಚನಗೊಳಿಸಿತು. ಈ ಮಹಾ ಸಮ್ಮೇಳನದ ಜಾಥಾದಲ್ಲಿ ಪ್ರಕಟವಾದ ಯುವಕ-ಯುವತಿಯರ ವಿಪ್ಲವಾವೇಶವನ್ನು ಅಕ್ಷರಗಳಲ್ಲಿ ಬರೆಯುವುದಕ್ಕೆ ಸಾಧ್ಯವಿಲ್ಲ. ಕೇರಳದ ಜನದ್ರೋಹಿ ಸರಕಾರ ಹಾಗೂ ಕೇಂದ್ರದ ಜನವಿರೋಧಿ ಸರಕಾರಗಳ ನೀತಿಯನ್ನು ಹಾಸ್ಯಮಾಡಿ ರಚಿಸಿದ ಮಾಪಿಳ್ಳೆ ಹಾಡುಗಳು, ಕೋಲಾಟಗಳು ಜನತೆಗೆ ಅತೀವ ಸಂತೋಷ ನೀಡಿದವು. ಒಟ್ಟು ಮೂರು ಲಕ್ಷ ಜನ ಭಾಗವಹಿಸಿದ ರ್‍ಯಾಲಿ ಮತ್ತು ಬಹಿರಂಗ ಸಭೆ, ಕೇರಳದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತದರ ಯುವಜನ ಸಂಘಟನೆಗೆ ಇರುವ ಜನ ಬೆಂಬಲವನ್ನು ವ್ಯಕ್ತಪಡಿಸಿತು. ಬಹಿರಂಗ ಸಭೆಯಲ್ಲಿ ಕಾಂ. ಇ.ಕೆ. ನಯನಾರ್, ಎಂ.ವಿ. ರಾಘವನ್ ಮೊದಲಾದವರು ಮಾತನಾಡಿದರು.

ಹೊಸ ರಾಜ್ಯ ಸಮಿತಿ ಅಧ್ಯಕ್ಷರಾಗಿ ಟಿ.ವಿ. ದಾಸನ್ ಮತ್ತು ಕಾರ್ಯದರ್ಶಿಯಾಗಿ ಇ.ವಿ. ಜಯರಾಜನ್ ಮತ್ತು 48 ಸದಸ್ಯರ ಹೊಸ ರಾಜ್ಯ ಸಮಿತಿಯನ್ನು ಚುನಾಯಿಸಲಾಯಿತು.

●

ಆರ್ಥಿಕ ಸಮೀಕ್ಷೆ:

(3ನೇ ಪುಟದಿಂದ)

ಮಂಕು ಬೂದಿ ಎರಚಿ ಬಂಡವಾಳಶಾಹಿಗಳ ಬೊಕ್ಕಸ ತುಂಬಿಸುವ ಯೋಜನೆಯ ನಗ್ನ ಸತ್ಯ ನಮ್ಮ ಮುಂದಿದೆ. ಈ ಅವಧಿಯಲ್ಲಿ ಭಾರತದ ಜನಕೋಟಿಯ ಬಡತನ, ನಿರುದ್ಯೋಗ ಹೆಚ್ಚುತ್ತಾ ಹೋದುದಲ್ಲದೆ, ಬೆಲೆ ಏರಿಕೆ, ಕರಭಾರಗಳಿಂದ ದುಡಿಯುವ ಜನರ ಗ್ರಾಹಕ ಶಕ್ತಿ ಮತ್ತು ಜೀವನ ಮಟ್ಟ ಕುಸಿಯುತ್ತಾ ಬಂದಿತು. ●

ಪ್ಲೀನಮ್ ಸಭೆಯಲ್ಲಿ ಅಂಗೀಕರಿಸಿದ ಗೊತ್ತುವಳಿ

(5ನೇ ಪುಟದಿಂದ)

ಯನ್ನು ಕಾಪಾಡುವ ಸಲುವಾಗಿ, ವಿಮರ್ಶೆ ಮತ್ತು ಸ್ವವಿಮರ್ಶೆಗಳ ಮೂಲಕ ಜನತೆಯ ಹೋರಾಟಗಳು ಮತ್ತು ಪಕ್ಷದ ಚಟುವಟಿಕೆಗಳನ್ನು ಪರಿಶೀಲಿಸಿದಾಗ, ಎಲ್ಲ ಸಮಿತಿಗಳೂ ಅದನ್ನು ಖಂಡಿತವಾಗಿ ಕರ್ತವ್ಯವೆಂಬಂತೆ ಒಪ್ಪಿಕೊಳ್ಳಬೇಕು.

75. ಈ ಉದ್ದೇಶದ ಸಲುವಾಗಿ ಪಕ್ಷದ ಪತ್ರಗಳನ್ನು ಬರೆಯುವುದರ ಬಗ್ಗೆ ರಾಜ್ಯ ಸಮಿತಿಗಳು ಆಲೋಚಿಸಬೇಕು. ಪಕ್ಷದ ಘಟಕಗಳು ಎತ್ತುವ ಮುಖ್ಯ ಪ್ರಶ್ನೆಗಳ ಬಗ್ಗೆ ಪಕ್ಷದ ಪತ್ರಿಕೆಯಲ್ಲಿ ಬರೆಯುವ ಅಥವಾ ಪಕ್ಷದ ಸದಸ್ಯರಿಗೆ ಮಾತ್ರ ಹಂಚಲಾಗುವ ವಿಶೇಷ ಪ್ರಕಟಣೆಗಳನ್ನು ಹೊರಡಿಸುವ ಕಾರ್ಯದ ಬಗ್ಗೆ ರಾಜ್ಯ ಸಮಿತಿಗಳು ಯೋಚಿಸಬೇಕು.

76. ಎಲ್ಲ ರಾಜ್ಯ ಸಮಿತಿಗಳೂ ಕೇಂದ್ರ ಸಮಿತಿಯ ಸಹಾಯದೊಡನೆ, ಅಧಿಕಾರಶಾಹಿ, ಉದಾರವಾದ ಮತ್ತು ಗುಂಪುಗಾರಿಕೆಯ ವಿರುದ್ಧ ಹೋರಾಡಬೇಕು. ರಾಜ್ಯಸಮಿತಿಗಳು ತಮ್ಮ ಕಾರ್ಯರಂಗದ ಕ್ರಮಗಳನ್ನು ಪರೀಕ್ಷಿಸಿಕೊಂಡು, ಪ್ರಜಾಸತ್ತಾತ್ಮಕ ಕೇಂದ್ರವಾದದ ನಿಯಮದ ಹೆಗ್ಗಳಿಕೆಯನ್ನು ಸ್ಥಾಪಿಸಬೇಕು ಮತ್ತು ಅದರ ದಿನನಿತ್ಯದ ಆಚರಣೆಯನ್ನು ಕಾಪಾಡಬೇಕು.

76. (ಎ) ಅಧಿಕಾರಶಾಹಿಯ ಎಲ್ಲ ರೂಪಗಳು ಮತ್ತು ಅಶಿಸ್ತನ್ನು ಹೊಡೆದೋಡಿಸುವ ಸಲುವಾಗಿ, ಪಕ್ಷದ ಪ್ರಜಾಸತ್ತಾತ್ಮಕ ಕಾರ್ಯಾಚರಣೆಯ ಬಗ್ಗೆ, ಪಕ್ಷದ ಸದಸ್ಯರು ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ಮತ್ತು ಮೇಲಿನ ಸಮಿತಿಗಳಿಗೆ ತೋರಿಸಬೇಕಾದ ಗೌರವದ ಬಗ್ಗೆ ಪಕ್ಷದ ಸದಸ್ಯರಿಗೆ ಪುನರ್ ಶಿಕ್ಷಣವನ್ನು ಎಲ್ಲ ರಾಜ್ಯಸಮಿತಿಗಳು ಮತ್ತು ಜಿಲ್ಲಾ ಸಮಿತಿಗಳು ನೀಡಬೇಕು.

77. ಕಾರ್ಯದರ್ಶಿಯು ಸೆಕ್ರೆಟೇರಿಯೆಟ್‌ನ ಸ್ಥಾನದಲ್ಲಿ ಕೆಲಸಮಾಡುವುದು, ಸಮಿತಿಯು ನಾಮಕಾವಸ್ಥೆ ಅಸ್ತಿತ್ವದಲ್ಲಿರುವುದು ಮತ್ತು ಒಬ್ಬೊಬ್ಬ ವ್ಯಕ್ತಿಗಳ ಕೈಯಲ್ಲಿ ನೀತಿಯನ್ನು ರೂಪಿಸುವ ಅಧಿಕಾರವಿರುವುದು ಇವುಗಳನ್ನು ಕೊನೆಗೊಳಿಸಿ, ಸಾಮೂಹಿಕವಾಗಿ ಕೆಲಸ ಮಾಡುವುದನ್ನು ತರುವುದಕ್ಕೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕು. ಕೆಲಸಗಳನ್ನು ಸ್ಪಷ್ಟವಾಗಿ ಹಂಚಿಕೊಳ್ಳುವುದು, ಕೊಟ್ಟ ಕೆಲಸದ ಬಗ್ಗೆ ವೈಯಕ್ತಿಕ ಜವಾಬ್ದಾರಿ ವಹಿಸುವುದು ಮತ್ತು ತೀರ್ಮಾನಗಳ ಬಗ್ಗೆ ಸಾಮೂಹಿಕ ಜವಾಬ್ದಾರಿ ಇರುವುದು-ಇವುಗಳನ್ನು ಮತ್ತೆ ಸ್ಥಾಪಿಸಬೇಕು. ರಾಜ್ಯಸಮಿತಿಗಳು ಸಾಮಾನ್ಯವಾಗಿ ಎರಡು ತಿಂಗಳಿಗೊಮ್ಮೆ ಸಭೆಸೇರಬೇಕು ಮತ್ತು ಸೆಕ್ರೆಟೇರಿಯೆಟ್ ಹದಿನೈದು ದಿನಗಳಿಗೊಮ್ಮೆಯಾದರೂ ಸಂಧಿಸಬೇಕು. ಇದು ಜಿಲ್ಲಾ ಸಮಿತಿಗಳು ಮತ್ತು ಅದರ ಸೆಕ್ರೆಟೇರಿಯೆಟ್‌ಗಳಿಗೂ ಅನ್ವಯಿಸುತ್ತದೆ.

78. ಪಕ್ಷದ ಸರಿಯಾದ ವರ್ಗ ಸ್ವರೂಪವನ್ನು ಖಚಿತಮಾಡಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಗಮನ ಹರಿಸದಿರುವುದನ್ನು ರಾಜ್ಯ ಸಮಿತಿಗಳು ಕಂಡುಕೊಳ್ಳಬೇಕು. ಕಾರ್ಮಿಕವರ್ಗ ಮತ್ತು ಇತರ ಶ್ರಮಿಕ ವರ್ಗಗಳಿಂದ ಕಾರ್ಯಕರ್ತರನ್ನು ಆಯ್ದುಕೊಂಡು ಅವರಿಗೆ ತರಬೇತಿ, ಶಿಕ್ಷಣ ಮತ್ತು ಬಡ್ತಿಗಳನ್ನು ನೀಡುವುದರ ಬಗ್ಗೆ ಕ್ರಮಗಳನ್ನು ಕೈಗೊಳ್ಳಬೇಕು.

79. ಪಕ್ಷದ ಪತ್ರಿಕೆಗಳು ಮತ್ತು ಅವುಗಳ ಸಂಪಾದನೆಯ ಕೆಲಸವು ಸಂಬಂಧಪಟ್ಟ ಸಮಿತಿಯ ಸಾಮೂಹಿಕ ಜವಾಬ್ದಾರಿಯಾಗಬೇಕು. ಪಕ್ಷದ ನೀತಿಯನ್ನು ಅದರ ಮೂಲಕ ಸರಿಯಾಗಿ ಮುಂದಿಡಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಅದರ ಲೇಖನಗಳನ್ನು ಕಾಲಕಾಲಕ್ಕೆ ಚರ್ಚಿಸಬೇಕು.

80. ಪಕ್ಷದ ಹಣದ ವಸೂಲಿ ಮತ್ತು ಖರ್ಚಿನ ಬಗ್ಗೆ ಯಾವ ಮೇಲಿನ ಸಮಿತಿಯ ಉಸ್ತುವಾರಿಯೂ ಕಂಡು ಬರುವುದಿಲ್ಲ. ಸಮಿತಿಗಳ ಆದಾಯ ಮತ್ತು ಖರ್ಚಿನ ಬಗ್ಗೆ ಎಲ್ಲಾ ಹಂತಗಳಲ್ಲೂ ಉಸ್ತುವಾರಿ ಇಡಲು ಒಂದು ವ್ಯವಸ್ಥೆ ಮಾಡಬೇಕು. ಘಟಕಗಳ ಹಣಕಾಸಿನ ಪರಿಸ್ಥಿತಿಯ ಬಗ್ಗೆ ರಾಜ್ಯ ಸಮಿತಿಗಳು ವರದಿಗಳನ್ನು ಪಡೆಯುವಂತಿರಬೇಕು. ಇದರಿಂದ ಆದಾಯ ಮತ್ತು ಖರ್ಚು, ಪೂರ್ಣಾವಧಿ ಕೆಲಸಗಾರರ ವೇತನ ಇವುಗಳ ಬಗ್ಗೆ ಸರಿಯಾದ ಮಾರ್ಗದರ್ಶನ ನೀಡಲು ಸಮಿತಿಗೆ ಸಾಧ್ಯವಾಗುತ್ತದೆ.

81. ಪಕ್ಷದ ಸಂವಿಧಾನಕ್ಕೆ ಅನುಗುಣವಾಗಿ ತನಗೆ ನೀಡಲಾದ ಜವಾಬ್ದಾರಿಗಳನ್ನು ಪಕ್ಷದ ಪ್ರತಿ ಸದಸ್ಯನೂ ವಿಧೇಯವಾಗಿ ನಿರ್ವಹಿಸುತ್ತಾನೆಂಬುದನ್ನು ರಾಜ್ಯ ಮತ್ತು ಜಿಲ್ಲಾ ಸಮಿತಿಗಳು ಖಚಿತಪಡಿಸಿಕೊಳ್ಳಬೇಕು.

82. ಪಕ್ಷದ ಪ್ರತಿ ಸದಸ್ಯನೂ ತನ್ನ ಕನಿಷ್ಠ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ನಿರತನಾಗುವಂತೆ ಮಾಡಲು, ಪ್ರಾಥಮಿಕ ಘಟಕವಾದ ಶಾಖೆಯು ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳುವುದು ಅಗತ್ಯ. ಸದ್ಯದ ಕಷ್ಟಗಳನ್ನು ಗಮನಿಸದೆ ಶಾಖೆಗಳಿಗೆ ಬೆಂಬಲ ನೀಡಿ, ವಿಶೇಷ ಗಮನ ಕೊಡಬೇಕು. ಆಗ ಅವು ಪಕ್ಷದ ಮೂಲಭೂತ ರಾಜಕೀಯ ಘಟಕಗಳಾಗಿ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸಲು ಕಲಿಯುತ್ತವೆ.

ಆದ್ದರಿಂದ, ಶಾಖೆಯ ಕಾರ್ಯದರ್ಶಿಗಳ ಶಿಕ್ಷಣ ಮತ್ತು ತರಬೇತಿಗೆ ಮೇಲಿನ ಸಮಿತಿಗಳು ಆದ್ಯ ಗಮನ ಕೊಡಬೇಕು. ಇದರಿಂದ ಅವರು ಶಾಖೆಗಳನ್ನು ಪರಿಣಾಮಕಾರಿಯಾಗಿ ಮುಂದೆ ತರಬಹುದು. ಈ ಉದ್ದೇಶವನ್ನು ಈಡೇರಿಸಬೇಕಾದರೆ, ಶಾಖೆಯ ಕಾರ್ಯದರ್ಶಿಗಳ ಸಭೆಯನ್ನು ಪದೇ ಪದೇ ಕರೆದು, ಸದ್ಯದ ಬೆಳವಣಿಗೆಗಳ ಬಗ್ಗೆ ಅವರಿಗೆ ವರದಿ ನೀಡಬೇಕು. ಆಗ ಅವರು ತಮ್ಮ ಶಾಖೆಗಳಿಗೆ ಇದನ್ನು ವರದಿ ಮಾಡಬಹುದು.

83. ಶಾಖೆಯು ಪಕ್ಷದ ಮೂಲಭೂತ ಘಟಕವಾಗಿ ಕೆಲಸಮಾಡಬೇಕು. ಶಾಖೆಯ ಬದಲು ಸರ್ವಸದಸ್ಯರ ಸಭೆ ಕೆಲಸ ಮಾಡುವಂತಹ ಪ್ರವೃತ್ತಿಯನ್ನು ಹೋಗಲಾಡಿಸಬೇಕು.

ಆದರೆ ಅದೇ ಕಾಲಕ್ಕೆ, ಸರ್ವಸದಸ್ಯರ ಸಭೆಗಳಲ್ಲಿ ನಡೆಯುವ ಭಾಷಣಗಳು ಮತ್ತು ಪ್ರಚಾರಗಳು ಮತ್ತು ವರದಿಗಳು ಪಕ್ಷದ ಸದಸ್ಯರ ಶಿಕ್ಷಣದಲ್ಲಿ ದೊಡ್ಡ ಪಾತ್ರ ವಹಿಸಬೇಕು. ಪಕ್ಷದ ಚಟುವಟಿಕೆಗಳ ಬಗ್ಗೆ ಅವರು ಜೀವಂತ ಸಂಬಂಧ ಇಟ್ಟುಕೊಳ್ಳುವುದಕ್ಕೆ ಮತ್ತು ಜನತೆಯ ಮಧ್ಯೆ ಪ್ರಚಾರಗಳನ್ನು ನಡೆಸುವುದಕ್ಕೆ ಕೂಡ ಇವು ಸಹಾಯ ಮಾಡುತ್ತವೆ.

84. ಸರ್ವಸದಸ್ಯರ ಸಭೆಗೆ ಹಿತೈಷಿಗಳನ್ನೂ ಕರೆಯಬಹುದು. ಈ ಸಭೆಗಳಲ್ಲಿ ಪ್ರಶ್ನೆಗಳನ್ನು ಆಹ್ವಾನಿಸಿ ಅವಕ್ಕೆ ಉತ್ತರ ನೀಡಬೇಕು. ಶಿಕ್ಷಣ ಮತ್ತು ಜ್ಞಾನೋದಯಗಳಿಗೆ ಇಂಥ ಸಭೆಗಳನ್ನು ಪೂರ್ಣವಾಗಿ ಬಳಸಿಕೊಳ್ಳಬೇಕು.

ಸರ್ವಸದಸ್ಯರ ಸಭೆಯನ್ನು ಶಿಕ್ಷಣ ಮತ್ತು ತರಬೇತಿಯ ಸಾಧನವನ್ನಾಗಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕಾದರೆ, ಅನೇಕ ಸಂಖ್ಯೆಯಲ್ಲಿ ಕಾಮ್ರೇಡುಗಳು, ಒಂದು ಸಾರ್ವತ್ರಿಕ ಪತ್ಯ ಕ್ರಮದ ಮೇಲೆ ವರದಿಗಳನ್ನು ಮಾಡುವ ಕರ್ತವ್ಯವನ್ನು ವಹಿಸಿಕೊಳ್ಳಬೇಕು. ಈಗ ಸದ್ಯದಲ್ಲಿ ಒಂದೆರಡು ಕಾಮ್ರೇಡುಗಳು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾರೆ. ಇದರಿಂದ ಸಭೆಗಳು ಪದೇ ಪದೇ ನಡೆಯುವುದು ಕಷ್ಟವಾಗುತ್ತದೆ ಮತ್ತು ಪ್ರತಿಬಾರಿಯೂ ಸದಸ್ಯತ್ವದ ಕೆಲಭಾಗವನ್ನು ಮಾತ್ರ ಪಕ್ಷವು ಉದ್ದೇಶಿಸಿದಂತಾಗುತ್ತದೆ. ಇದರಿಂದ ಸಾಮೂಹಿಕವಾಗಿ ಕೆಲಸಮಾಡುವ ಪದ್ಧತಿಯು ದುರ್ಬಲವಾಗುತ್ತದೆ.

85. ಕೊನೆಯದಾಗಿ, ಸಂಘಟನಾತ್ಮಕ ಪರಿಸ್ಥಿತಿಯನ್ನು ಸರಿಯಾಗಿ ನಿರ್ವಹಿಸಬೇಕಾದರೆ, ಎಲ್ಲ ಸಮಿತಿಗಳು ಮತ್ತು ನಾಯಕರು ತಮ್ಮ ಸೈದ್ಧಾಂತಿಕ ಮಟ್ಟವನ್ನು ಹೆಚ್ಚಿಸಿಕೊಳ್ಳುವುದು ಅಗತ್ಯವಾಗಿದೆ. ಎಂದರೆ ಸ್ವಂತ ಬೆಳವಣಿಗೆಗಾಗಿ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ನಿರಂತರವಾಗಿ ಅಭ್ಯಾಸ ಮಾಡುವುದು ಅಗತ್ಯವಾಗಿದೆ. ಸ್ವಂತ ಬೆಳವಣಿಗೆಯನ್ನು ನಿರ್ಲಕ್ಷಿಸುವವರು, ಪಕ್ಷದ ಸಂಘಟನಾತ್ಮಕ ತಿದ್ದುಕೊಳ್ಳುವಿಕೆಯ ಹೋರಾಟದ ನೇತೃತ್ವವನ್ನು ನಿರ್ವಹಿಸಲಾರರು. ●

ಕರ್ಣಾಟಕ ತೋಟ ಕಾರ್ಮಿಕರ ಸಂಘದ ಸಭೆ

ಕರ್ಣಾಟಕ ತೋಟ ಕಾರ್ಮಿಕರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ತಾ॥ 20-2-79 ರಂದು ಸಕಲೇಶಪುರದ ಕಚೇರಿಯಲ್ಲಿ ಉಪಾಧ್ಯಕ್ಷರಾದ ಕಾ॥ ಸಿ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ವರದಿಯನ್ನು ಕಾರ್ಯದರ್ಶಿ ಕಾ॥ ವಿ. ಸುಕುಮಾರ್ ಅವರು ಸಭೆಯ ಮುಂದಿಟ್ಟರು.

ತೋಟಕಾರ್ಮಿಕರ ಸಂಬಳ ಸವಲತ್ತುಗಳ ಬಗ್ಗೆ ಕೆಲವು ಬೇಡಿಕೆಗಳನ್ನು ಮುಂದಿಡಬೇಕೆಂದು ಸಭೆಯು ತೀರ್ಮಾನಿಸಿ, ಈ ಬೇಡಿಕೆಗಳ ನೋಟೀಸನ್ನು ಕೊಡಲು ಸಂಘದ ಕಾರ್ಯದರ್ಶಿಯವರಿಗೆ ಸಭೆಯು ಅಧಿಕಾರವನ್ನು ಕೊಟ್ಟಿತು.

ಮಂಗಳೂರಿನಲ್ಲಿ ನಡೆಯಲಿದ್ದ ದುಡಿಯುವ ಮಹಿಳೆಯರ ಸಮ್ಮೇಳನಕ್ಕೆ ಹದಿನೆಂಟು ಪ್ರತಿನಿಧಿಗಳನ್ನು ಇಬ್ಬರು ಮಹಿಳಾ ವೀಕ್ಷಕರನ್ನು ಕಳುಹಿಸಲು ತೀರ್ಮಾನಿಸಲಾಯಿತು. ಹಾಗೇ, ಮದರಾಸಿನಲ್ಲಿ ನಡೆಯಲಿರುವ ಸಿ.ಐ.ಟಿ.ಯು. ಸಮ್ಮೇಳನಕ್ಕೂ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು.

ಅನೇಕ ಸಂಸ್ಥೆಗಳನ್ನು ಅಗತ್ಯ ಸೇವಾ ಸಂಸ್ಥೆಗಳೆಂದು ಪರಿಗಣಿಸಿ, ಅವುಗಳಲ್ಲಿ ಮುಷ್ಕರಗಳನ್ನು ನಿಷೇಧಿಸುವ ಸೂಚನೆಯನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯಿತು. ದಾಂಡೇಲಿಯ ಎಲೆಕ್ಟ್ರೋ ಮೆಟಲರ್ಜಿಕಲ್ ಸಂಸ್ಥೆಯ ಆಡಳಿತ ವರ್ಗದ ನೀತಿಯನ್ನು ಖಂಡಿಸಲಾಯಿತು. ವಿರಾಜಪೇಟೆಯ ಹೂವಿನ ಾಡು ತೋಟದ ಸಂಘದ ಕಾರ್ಮಿಕರನ್ನು ಪೋಲೀಸ್‌ಠಾಣೆಯಲ್ಲಿ ಥಳಿಸಿದ್ದನ್ನು ಸಭೆಯು ಖಂಡಿಸಿತು. ಹಾಸನದಲ್ಲಿ ಕಾರ್ಮಿಕರ ಮೇಲೆ ನಡೆದ ಹಲ್ಲೆಗಳನ್ನು ಖಂಡಿಸಿದ ಸಭೆಯು, ಈ ಅನಾಹುತಗಳನ್ನು ತಪ್ಪಿಸಬೇಕೆಂದು ರಾಜ್ಯಸರಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸಿತು.

●

ಸ್ಟೈಪೆಂಡರಿ ಪದವೀಧರರ ಜಿಲ್ಲಾ ಸಮಿತಿ ರಚನೆ

ಪ್ರಜಾಸತ್ತಾತ್ಮಕ ಯುವಕರ ಫೆಡರೇಶನ್ನಿನ ಆಶ್ರಯದಲ್ಲಿ ಸ್ಟೈಪೆಂಡರಿ ಪದವೀಧರರ ರಾಯಚೂರು ಜಿಲ್ಲಾ ಸಮಿತಿಯನ್ನು ರಚಿಸಲು ದಿನಾಂಕ 2 ಮತ್ತು 3 ರ ಮಾರ್ಚಿಯಲ್ಲಿ ಸಿಟಿ ಮುನಿಸಿಪಲ್ ಹಾಲ್‌ನಲ್ಲಿ ಸಾಯಂಕಾಲ ನಾಲ್ಕು ಗಂಟೆಗೆ ಸಭೆ ಕರೆಯಲಾಗಿತ್ತು. ಜಿಲ್ಲೆಯ ಒಂಭತ್ತು ತಾಲ್ಲೂಕುಗಳಿಂದ ಪ್ರತಿನಿಧಿಗಳು ಬಂದಿದ್ದರು. ಕಾರ್ಯಕಾರಿಮಂಡಳಿಯನ್ನು ಸಭೆಯಲ್ಲಿ ಆರಿಸಲಾಯಿತು.

ರಾಯಚೂರಿನಲ್ಲಿ ಸಿಟಿ ಮುನಿಸಿಪಲ್ ಕಾರ್ಪೋರೇಷನ್ನಿನಿಂದ ಮೆರವಣಿಗೆ ನಡೆಸಲಾಯಿತು. ●

ಮುಖ್ಯಮಂತ್ರಿಯವರಿಗೆ ಮನವಿ

ಪ್ಲಾಂಟೇಷನ್ ಕಾರ್ಮಿಕರ ಕನಿಷ್ಠ ವೇತನ ಪುನರ್ವಿಮರ್ಶೆ ಬಗ್ಗೆ ಸಿ.ಐ.ಟಿ.ಯು. ವಿನ ಪರವಾಗಿ ರಾಜ್ಯ ಸಿ.ಐ.ಟಿ.ಯು. ವಿನ ಪ್ರಧಾನ ಕಾರ್ಯದರ್ಶಿ ಕಾ॥ ಸಿ. ನಂಜುಂಡಪ್ಪನವರು ಮುಖ್ಯಮಂತ್ರಿಯವರಿಗೆ ಬರೆದ ಮನವಿ—

ಮಾನ್ಯರೇ,

ಪ್ಲಾಂಟೇಷನ್ ಕಾರ್ಮಿಕರ ಪುನರ್ವಿಮರ್ಶಿತ ಕನಿಷ್ಠ ಕೂಲಿ ಬಗ್ಗೆ ಎರಡು ವಾರಗಳಲ್ಲಿ ಸರ್ಕಾರವು ಆಜ್ಞೆ ಹೊರಡಿಸುವುದೆಂದು ತಾವು ಸುಂಟಿಕೊಪ್ಪದಲ್ಲಿ ಈ ತಿಂಗಳ 15ನೆಯ ತಾರೀಖು ಹೇಳಿರುವುದಾಗಿ ಪತ್ರಿಕೆಗಳು ಸುದ್ದಿಯನ್ನು ಪ್ರಕಟಿಸಿವೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ನಾವು ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇವೆ. ಕಾಫಿ ಆಕ್ಟಿನ ಪ್ರಕಾರ ಬೆಳೆದ ಕಾಫಿಯನ್ನು ಕಾಫಿ ಬೆಳೆಗಾರ (ಪ್ಲಾಂಟರು) ಕಾಫಿ ಬೋರ್ಡಿಗೇನೇ ಮಾರಾಟಮಾಡಬೇಕು. ಕೊಂಡ ಕಾಫಿಗೆ ಕಾಫಿ ಬೋರ್ಡು ಎಲ್ಲಾ ಪ್ಲಾಂಟರುಗಳಿಗೂ ಒಂದೇ ದರದ ಬೆಲೆಯನ್ನು ಕೊಡುತ್ತದೆ.

ಕೇರಳ ಮತ್ತು ತಮಿಳು ನಾಡುಗಳಲ್ಲಿ ಈಗ ಕಾಫಿ ತೋಟದ ಕಾರ್ಮಿಕರಿಗೆ ಸುಮಾರು ರೂ. 7-50 ಕನಿಷ್ಟ ಕೂಲಿ ಸಿಕ್ಕುತ್ತಿದೆ. ಕೇರಳ ಮತ್ತು ತಮಿಳುನಾಡುಗಳ ಪ್ಲಾಂಟರುಗಳಿಗೆ ಈ ಕೂಲಿಯನ್ನು ಕೊಡಲು ಸಾಧ್ಯವಾದರೆ ನಮ್ಮ ರಾಜ್ಯದ ಕಾಫಿ ಪ್ಲಾಂಟರುಗಳಿಗೂ ಇಷ್ಟು ಕೂಲಿಯನ್ನು ಕೊಡಲು ಸಾಧ್ಯವಿದೆ.

ಒಪ್ಪಂದ ಪ್ರಕಾರ ನಮ್ಮ ರಾಜ್ಯದ ಪ್ಲಾಂಟೇಷನ್ ಕಾರ್ಮಿಕರಿಗೆ ಸಿಕ್ಕುತ್ತಿರುವ ಕೂಲಿಗಿಂತಲೂ ತಮ್ಮ ಸರ್ಕಾರ ಹಿಂದೆ ನಿರ್ಣಯಿಸಿದ ಕೂಲಿ ದಿವಸಕ್ಕೆ ರೂ. 1-20 ರಷ್ಟು ಕಡಿಮೆಯಿದೆ.

ಕೂಲಿಯ ಬಗ್ಗೆ ಮಾಲೀಕರ ಸಂಘಗಳಿಗೂ, ಕಾರ್ಮಿಕ ಸಂಘಗಳಿಗೂ ಆಗಿದ್ದ ಕೈಗಾರಿಕಾವಾರು ಒಪ್ಪಂದವು ಈ ತಿಂಗಳಿನ 31ನೆಯ ತಾರೀಖಿಗೆ ಮುಗಿಯುತ್ತದೆ. 1-4-79 ರಿಂದ ಕೂಲಿ ಎಷ್ಟಿರಬೇಕು ಎಂಬುದರ ಬಗ್ಗೆ ಪ್ಲಾಂಟೇಷನ್ ಕಾರ್ಮಿಕ ಸಂಘಗಳು ಪ್ಲಾಂಟೇಷನ್ ಆಡಳಿತ ಮಂಡಳಿಗಳ ಮುಂದೆ ಹಾಗೂ ಅವರ ಸಂಘಗಳ ಮುಂದೆ ಬೇಡಿಕೆಗಳನ್ನಿರಿಸಿವೆ.

ತಮ್ಮ ಸರ್ಕಾರದ ಕನಿಷ್ಟ ಕೂಲಿಯ ಸಲಹಾ ಮಂಡಳಿಯು ಪ್ಲಾಂಟೇಷನ್ ಕಾರ್ಮಿಕರಿಗೆ ದಿವಸಕ್ಕೆ ರೂ. 6-00 ರಂತೆ ಕನಿಷ್ಟ ಕೂಲಿಯನ್ನು ನಿರ್ಣಯಿಸಲು ಶಿಫಾರಸು ಮಾಡಿರುವುದಾಗಿ ಸುದ್ದಿ ಇದೆ.

ತಾವುಗಳು ಸಮಾಜದ ದುರ್ಬಲ ವಿಭಾಗದ, ಹರಿಜನ, ಗಿರಿಜನರ ಉದ್ಧಾರಕರೆಂದು ಹೇಳಲಾಗುತ್ತಿದೆ. ಪ್ಲಾಂಟೇಷನ್ ಕಾರ್ಮಿಕರಲ್ಲಿ ಶೇ. 70 ರಷ್ಟು ಹರಿಜನರು, ಉಳಿದವರು ಜಾತಿ ಶ್ರೇಣಿಯಲ್ಲಿ ಅವರಿಗೆ ಸಮೀಪವಿರುವವರು.

ತಮ್ಮ ಸರ್ಕಾರವು ನಿರ್ಣಯಿಸಹೊರಟಿರುವ ಪುನರ್ವಿಮರ್ಶಿತ ಕನಿಷ್ಟ ಕೂಲಿ ದಿನಕ್ಕೆ ರೂ. 8-00ಕ್ಕೆ ಕಡಿಮೆಯಿರಕೂಡದೆಂದೂ, ಯಾವುದೇ ಕಾರಣದಿಂದ ಕೇರಳ, ತಮಿಳುನಾಡುಗಳಲ್ಲಿರುವ ಕನಿಷ್ಟ ಕೂಲಿಗಿಂತ ಕಡಿಮೆ ಇರದಂತೆ ತಾವು ನೋಡಬೇಕೆಂದೂ ರಾಜ್ಯದ 2 ಲಕ್ಷ ಪ್ಲಾಂಟೇಷನ್ ಕಾರ್ಮಿಕರ ಪರವಾಗಿ ಹಾಗೂ ಸಿ.ಐ.ಟಿ.ಯು. ಪರವಾಗಿ ತಮ್ಮನ್ನು ಬೇಡಿಕೊಳ್ಳುತ್ತೇನೆ. ●

ಶಿಡ್ಲಘಟ್ಟ ಪುರಸಭೆಯ ಮುಂದೆ ಧರಣಿ ಸತ್ಯಾಗ್ರಹ

ದುರ್ಬಲವರ್ಗದವರಿಗೆ ಖಾಲಿ ನಿವೇಶನಗಳನ್ನು ಉಚಿತವಾಗಿ ಹಂಚಬೇಕೆಂದು ಶಿಡ್ಲಘಟ್ಟದಲ್ಲಿ ಅನೇಕ ವರ್ಷಗಳಿಂದ ಹೋರಾಟ ನಡೆದಿದೆ. ಇದರ ಫಲವಾಗಿ ಸರ್ವೆ ನಂಬರ್ 40 ರಲ್ಲಿ 8 ಎಕರೆ ಜಮೀನನ್ನು ಸೈಟುಗಳನ್ನಾಗಿ ವಿಂಗಡಿಸಿದ್ದಾರೆ. ನಂತರ ಪುರಸಭೆಯವರು ಒಂದು ರೂಪಾಯಿಗೆ ಒಂದರಂತೆ ಅರ್ಜಿಗಳನ್ನು ಮಾರಿ ಊರಿನ ದುರ್ಬಲರ ಕೈಲಿ ಅರ್ಜಿ ಹಾಕಿಸಿಕೊಂಡಿದ್ದಾರೆ. ಆದರೆ ಈ ಅರ್ಜಿಗಳನ್ನು ಸ್ವೀಕರಿಸಿ ಮೂರು ತಿಂಗಳಾದರೂ ಕೂಡ ಪುರಸಭೆಯ ಆಡಳಿತಾಧಿಕಾರಿಗಳು ನಿವೇಶನಗಳನ್ನು ಹಂಚಲು ಹಿಂದುಮುಂದೆ ನೋಡುತ್ತಿದ್ದಾರೆ. ಈ ವಿಳಂಬಕ್ಕೆ ಸ್ಥಳೀಯ ರಾಜಕಾರಣಿಗಳ ಒತ್ತಾಯವೂ ಇರುವುದು ಸ್ಪಷ್ಟವಾಗಿದೆ.

ನಿವೇಶನಗಳನ್ನು ಕೂಡಲೇ ಹಂಚಬೇಕೆಂದು ಒತ್ತಾಯಿಸಲು ಸಿ.ಐ.ಟಿ.ಯು. ವತಿಯಿಂದ ಮಾರ್ಚಿ 20 ರಂದು ಶಿಡ್ಲಘಟ್ಟ ಪುರಸಭೆ ಕಛೇರಿಯ ಮುಂದೆ ಧರಣಿ ಸತ್ಯಾಗ್ರಹ ನಡೆಸಲು ತೀರ್ಮಾನಿಸಲಾಗಿದೆ. ●

ತಾ॥ 14-3-79 ರಂದು ಸಂಘದ ಅಧ್ಯಕ್ಷರಾದ ಎಸ್. ಸೂರ್ಯನಾರಾಯಣರಾವ್‌ರವರ ಅಧ್ಯಕ್ಷತೆಯಲ್ಲಿ ಕಾರ್ಯಸಮಿತಿಯು ನಡೆಯಿತು. ಅದರಲ್ಲಿ ಕಾರ್ಮಿಕರ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸದೆ ಮಾಲೀಕರು ಕಾಲಹರಣ ಮಾಡುತ್ತಿರುವುದನ್ನು ಖಂಡಿಸಿತು. ಕಾರ್ಮಿಕರ ಈ ಕೆಲಸಕ್ಕೆ ತೆಗೆದುಕೊಳ್ಳುವುದು.

5. ಹಂಗಾಮಿ ಕಾರ್ಮಿಕರನ್ನು ಖಾಯಂಗೊಳಿಸುವುದು.

6. ಸರ್ವೀಸ್ ಬ್ರೇಕ್ ಮಾಡುವುದನ್ನು ನಿಲ್ಲಿಸುವುದು.

ಕಾರ್ಯಸಮಿತಿಯು ಸಂಘದ 78 ನೇ ಸಾಲಿನ ಲೆಕ್ಕ ಪತ್ರವನ್ನು ಖಜಾಂಚಿ

ಫೇಥರ್‌ಲೈಟ್ ಕಾರ್ಮಿಕರು ಹೋರಾಟಕ್ಕೆ ಸಿದ್ಧತೆ

ಕೆಳಕಂಡ ಬೇಡಿಕೆಗಳನ್ನು ತಾರೀಖು 31-3-79 ರ ಒಳಗೆ ಬಗೆಹರಿಸದಿದ್ದ ಪಕ್ಷದಲ್ಲಿ ಕಾರ್ಮಿಕರು ಮುಷ್ಕರಕ್ಕೆ ಸಿದ್ಧತೆ ಮಾಡಬೇಕೆಂದು ತೀರ್ಮಾನಿಸಲಾಯಿತು.

ಕಾರ್ಮಿಕರ ಬೇಡಿಕೆಗಳು :

1. ಗುತ್ತಿಗೆ ಕೆಲಸದ ಪದ್ಧತಿಯನ್ನು ರದ್ದುಗೊಳಿಸುವುದು.
2. ಅಟೆಂಡೆನ್ಸ್ ಮಾಡುವುದು.
3. ಬೋನಸ್
4. ತೆಗೆದಿರುವ ಕಾರ್ಮಿಕರನ್ನು

ಎಸ್.ಎನ್. ಶಂಕರ್‌ರವರು ಮಂಡಿಸಿದರು. ಚರ್ಚೆಗಳೊಡನೆ ಒಪ್ಪಲಾಯಿತು.

ಸಿ. ಐ. ಟಿ. ಯು. ರಾಜ್ಯ ಮತ್ತು ಕೇಂದ್ರಗಳ ಸುತ್ತೋಲೆಯನ್ನು ಸಭೆಯಲ್ಲಿ ಚರ್ಚಿಸಿ ಅಖಿಲ ಭಾರತ ಸಿ.ಐ.ಟಿ.ಯು. ಸಮ್ಮೇಳನವನ್ನು ಸ್ವಾಗತಿಸಿ ಸಮ್ಮೇಳನದ ಪ್ರತಿನಿಧಿಯಾಗಿ ಸಂಘದ ಕಾರ್ಯದರ್ಶಿಯವರಾದ ಆರ್. ಶ್ರೀನಿವಾಸ್‌ರವರನ್ನು ಕಳುಹಿಸಿಕೊಳ್ಳಲು ತೀರ್ಮಾನಿಸಿತು.

ಕೊನೆಯಲ್ಲಿ ಎಸ್. ಸೂರ್ಯನಾರಾಯಣರಾವ್‌ರವರು ಮಾತನಾಡಿ ಕಾರ್ಮಿಕರು ಮುಖ್ಯವಾಗಿ ರಾಜಕೀಯವನ್ನು ಅರ್ಥಮಾಡಿಕೊಳ್ಳಬೇಕೆಂದು ಮತ್ತು ಸಿ.ಐ.ಟಿ.ಯು. ವನ್ನು ಬಲಪಡಿಸಬೇಕೆಂದು ಕರೆಯಿತ್ತರು. ●

ಅಸಂಘಟಿತ ಕಲ್ಲುಕುಟಿಗರ ಸಂಘಟನೆ

ನಗರದ ಸುಂದರ ಸೋಪಾನಗಳಿಂದ ಹಿಡಿದು ಸಣ್ಣ ಗುಡಿಸಲುಗಳವರೆಗೆ ಕಲ್ಲುಗಳು ತುಂಬಾ ಅಗತ್ಯವಾಗಿವೆ. ಇಂತಹ ಕೆಂಪುಕಲ್ಲುಗಳನ್ನು ಕಡಿಯುವ ಕೂಲಿಕಾರರ ಪರಿಸ್ಥಿತಿ ಮಾತ್ರ ಬಹಳ ಚಿಂತಾಜನಕವಾಗಿದೆ. ಕಲ್ಲುಗಳನ್ನು ಕಡಿಯುವ ಕೆಲಸಗಾರರಿಗೂ, ಗ್ರಾಹಕರಿಗೂ ಮಧ್ಯವರ್ತಿಗಳಾಗಿ ನಿಂತ ಕಂಟ್ರಾಕ್ಟರುಗಳು ಇಲ್ಲಿ ಸಂಪೂರ್ಣ ಲಾಭವನ್ನು ಪಡೆದು, ಈ ಅಸಂಘಟಿತ ಕೆಲಸಗಾರರನ್ನು ಶೋಷಣೆಗೆ ಒಳಪಡಿಸುತ್ತಾರೆ.

ಈ ಪರಿಸ್ಥಿತಿಗೆ ಒಂದು ಸ್ಥಿರಪರಿಹಾರವನ್ನು ಹುಡುಕುವುದಕ್ಕಾಗಿ ಕಣ್ಣಾನೂರು ಜಿಲ್ಲಾ ಚೆಂಗಲ್ ತೊಳಿಲಾಳಿ ಯೂನಿಯನ್ನಿನ (ಸಿ.ಐ.ಟಿ.ಯು.) ಮಂಜೇಶ್ವರ ಡಿವಿಜನ್ ಸಮಿತಿಯು ಅದರ ಅಧ್ಯಕ್ಷರಾದ ಕಾ॥ ಕೆ. ರಾಘವ ಮತ್ತು ಕಾರ್ಯದರ್ಶಿ ಕಾ॥ ಬಿ. ಎಂ. ಸದಾನಂದ ಅವರ ಅವಿರತ ಪರಿಶ್ರಮದ ಫಲವಾಗಿ ಈ ಪ್ರದೇಶದ ಎಲ್ಲಾ ಕಲ್ಲು ಕಡಿಯುವ ಕೆಲಸಗಾರರನ್ನು ಸಂಘಟಿಸಿದೆ. ಕೆಲಸಗಾರರಿಗೆ ರಜಾಸಂಬಳ, ಬೋನಸ್ಸು, ಕನಿಷ್ಠಕೂಲಿ ಮೊದಲಾದುವುಗಳಿಗಾಗಿ ಹಲವು ಬೇಡಿಕೆಗಳನ್ನು ಮುಂದಿಟ್ಟಾಗ, ಚೆಂಗಲ್ ತೊಳಿಲಾಳಿ ಯೂನಿಯನ್ನಿನ ಶಕ್ತಿ ಮತ್ತು ಐಕ್ಯತೆಯನ್ನು ಕಂಡು ಕುಂಜತ್ತೂರು, ಮಂಜೇಶ್ವರ ಮತ್ತು ಉಪ್ಪಳದಲ್ಲಿರುವ ಕಂಟ್ರಾಕ್ಟರುಗಳು ಈ ಮೇಲಿನ ಅನುಕೂಲತೆಗಳನ್ನು ಒದಗಿಸುವ ಒಪ್ಪಂದಕ್ಕೆ ಸಹಿ ಹಾಕಿರುತ್ತಾರೆ.

ಎಲ್ಲಾ ಪ್ರದೇಶಗಳಲ್ಲೂ ಈ ರೀತಿ ಅಸಂಘಟಿತರನ್ನು ಸಂಘಟಿಸಿ, ಅವರ ಅವಶ್ಯಕತೆಗಳಿಗೆ ಹೋರಾಡುವುದು ಅಗತ್ಯವಾಗಿದೆ. ●

ಗ್ರಾಮ ಲೆಕ್ಕಾಧಿಕಾರಿಗಳ ಸಂಘದ ವಾರ್ಷಿಕ ಸಭೆ

ಶಿಡ್ಲಘಟ್ಟದಲ್ಲಿ ಕೋಲಾರ ಜಿಲ್ಲಾ ಗ್ರಾಮಲೆಕ್ಕಾಧಿಕಾರಿಗಳ ವಾರ್ಷಿಕ ಸಭೆಯು ದಿನಾಂಕ 11-3-79 ರಂದು ನಡೆಯಿತು. ಸಂಘದ ವರದಿಯನ್ನು ಸಭೆಯಲ್ಲಿ ಚರ್ಚೆಗೆ ಇಡಲಾಗಿತ್ತು.

ಈ ಸಭೆಗೆ ರಾಜ್ಯ ಗ್ರಾಮಲೆಕ್ಕಾಧಿಕಾರಿಗಳ ಸಂಘದ ಉಪಾಧ್ಯಕ್ಷರಾದ ಶ್ರೀ ಯಜ್ಞನಾರಾಯಣ ದೀಕ್ಷಿತ್ ಅವರು ವೀಕ್ಷಕರಾಗಿ ಬಂದಿದ್ದರು. ನಂತರ ಸಮಿತಿಯ ಪದಾಧಿಕಾರಿಗಳನ್ನು ಆರಿಸಲಾಯಿತು. □

ದಕ್ಷಿಣ ಕನ್ನಡ ಜಿಲ್ಲಾ ಎಸ್. ಎಫ್. ಐ. ಸಭೆ

ಮಾರ್ಚ್ 3 ರಂದು ಉಡುಪಿಯಲ್ಲಿ ಏರ್ಪಡಿಸಲಾಗಿದ್ದ ವಿದ್ಯಾರ್ಥಿಗಳ ಸಭೆಯನ್ನುದ್ದೇಶಿಸಿ ಕಾಮ್ರೇಡ್ ರಾಜೇಂದ್ರನ್ (ಎಸ್.ಎಫ್.ಐ. ರಾಜ್ಯ ಸಮಿತಿ ಉಪಾಧ್ಯಕ್ಷ), ಕಾ॥ ಆಚಾರ್ ಮತ್ತು ಕಾ॥ ಮಾಧವರವರು ಮಾತನಾಡಿದರು.

ಮಾರ್ಚ್ 4 ರಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ದ. ಕ. ಜಿಲ್ಲಾ ಸಮಿತಿಯ ಸಭೆ ಜರುಗಿತು. ಈ ಸಭೆಯಲ್ಲಿ ಕಾ॥ ರಾಜೇಂದ್ರನ್‌ರವರು 3ನೇ ಎಸ್.ಎಫ್.ಐ. ರಾಷ್ಟ್ರ ಸಮ್ಮೇಳನದ ವರದಿಯನ್ನು ನೀಡಿದರು. ಇದೇ ದಿನ ರಾಜ್ಯದ ರೈತ ಮುಖಂಡರಾದ ಕಾಮ್ರೇಡ್ ಪಿ. ರಾಮಚಂದ್ರರಾವ್‌ರವರು ಮಂಗಳೂರಿನಲ್ಲಿ ದ.ಕ. ಜಿಲ್ಲಾ ಸಮಿತಿಯ ಕಛೇರಿಯ ಪ್ರಾರಂಭೋತ್ಸವವನ್ನು ನೆರವೇರಿಸಿದರು. ●

ತನ್ನ ಪಕ್ಷ ವಾಮಪಕ್ಷನೆಂಬುದನ್ನು ಸಿ. ಪಿ. ಐ. ನಾಯಕರು ಸ್ಥಾಪಿಸಿಕೊಳ್ಳಬೇಕು.

(ಒಂದನೇ ಪುಟದಿಂದ)

ಈ ಮೇಲಿನ ವಾಕ್ಯಗಳ ಬಗ್ಗೆ ನಮ್ಮ ತಕರಾರೇನೂ ಇಲ್ಲ. "ಐಕ್ಯ ಕಾರ್ಯಾಚರಣೆ ಸಾಧ್ಯವಿರುವ ಮತ್ತು ಅಗತ್ಯವಿರುವ" ಕೆಲವು "ಒಪ್ಪಂದದ ವಲಯಗಳ" ಬಗ್ಗೆ ಅವರೇ ಮಾತನಾಡುತ್ತಾರೆಂಬ ಅಂಶದ ಬಗ್ಗೆ ಅವರ ಗಮನ ಸೆಳೆಯೋಣ. ಹೀಗೆ ಲೇಖನದಲ್ಲಿ ಮುಂದುವರೆಯುತ್ತಾ, ಸಿ.ಪಿ.ಐ. (ಎಂ.) ನವರು ಅವರು ಹೇಳುವ ಎಡ ಐಕ್ಯತೆಗೆ ಯಾವ ಶರತ್ತೂ ಇಲ್ಲದೆ ಒಪ್ಪಿಕೊಳ್ಳುವುದಕ್ಕೆ ಸಿದ್ಧರಾಗಬೇಕೆಂದು ಅವರು ಹೇಳುವುದು ಮಾತ್ರ ವಿಚಿತ್ರವಾಗಿದೆ. ಐಕ್ಯಕಾರ್ಯಾಚರಣೆಗಾಗಿ ಸೋದರ ಎಡಪಕ್ಷವೊಂದಕ್ಕೆ ಶರತ್ತುಗಳನ್ನು ಹಾಕುವ ದೃಷ್ಟಿಕೋನದಿಂದಲೇ, ಅವರಿಗೆ ಐಕ್ಯತೆಯ ಬಗ್ಗೆ ಇರುವ ನಿರುತ್ಸಾಹ ವ್ಯಕ್ತವಾಗುತ್ತದೆ" ಎಂದು ಅವರು ಹೇಳುತ್ತಾರೆ.

ವಿವಿಧ ರಾಜಕೀಯ ಸಂಬಂಧಗಳನ್ನುಳ್ಳ ಅನೇಕ ಸಾಮೂಹಿಕ ಸಂಘಟನೆಗಳಲ್ಲಿ "ಒಪ್ಪಂದದ ವಲಯಗಳು" ಹೆಚ್ಚಾಗುತ್ತಿರುವುದರಿಂದಲೇ ಕ್ರಿಯೆಯ ಐಕ್ಯತೆ ಸಾಧ್ಯವಾಗಿ, ಬೆಳೆಯುತ್ತಿದೆ ಎಂಬುದನ್ನು ರೆಡ್ಡಿಯವರೇ ಒಪ್ಪಬಹುದು.

ಉದಾಹರಣೆಗೆ ಕಾರ್ಮಿಕಸಂಘ ಚಳುವಳಿಯಲ್ಲಿ ದೇಶದಾದ್ಯಂತ ಅತಿ ಪ್ರಾಮುಖ್ಯ ಪಡೆದಿರುವ ಭೂತಲಿಂಗಂ ವರದಿ ಮತ್ತು ಕೈಗಾರಿಕಾ ಸಂಬಂಧಗಳ ಮಸೂದೆ ಮುಂತಾದವುಗಳ ಬಗ್ಗೆ ಒಪ್ಪಂದಗಳು ಇರದಿದ್ದರೆ, ರಾಜ್ಯ ಅಥವಾ ಸ್ಥಳೀಯವಾಗಿ ಪ್ರಮುಖವಾಗಿರುವ ಸಂಗತಿಗಳ ಬಗ್ಗೆ ಒಪ್ಪಂದ ಇರದಿದ್ದರೆ ಕಾರ್ಮಿಕಸಂಘಗಳಲ್ಲಿ ಐಕ್ಯ ಕಾರ್ಯಾಚರಣೆ ಇರುತ್ತಿರಲಿಲ್ಲ.

ಕೇಂದ್ರ ಮತ್ತು ರಾಜ್ಯಸರ್ಕಾರಗಳು ಅನುಸರಿಸುತ್ತಿರುವ ನೀತಿಗಳ ದಯದಿಂದ ರೈತ ಕೃಷಿಕಾರ್ಮಿಕರು ಮತ್ತಿತರ ಸಾಮೂಹಿಕ ಸಂಘಟನೆಗಳಲ್ಲಿಯೂ ಈ ಐಕ್ಯಕಾರ್ಯಾಚರಣೆಯನ್ನು ವಿಸ್ತರಿಸುವ ಸಾಧ್ಯತೆಗಳು ಹುಟ್ಟಿಕೊಂಡಿವೆ. ಜನಸಾಮಾನ್ಯರ ಜೀವನ ಮತ್ತು ದುಡಿಮೆಯ ಸ್ಥಿತಿಗತಿಗಳು ದಿನೇದಿನೇ ದುಸ್ಥಿತಿಗಿಳಿಯುತ್ತಿರುವುದರಿಂದ, ಜನತೆಯ ಪ್ರತಿಭಟನೆ ಮತ್ತು ಹೋರಾಟಗಳ ವಿಚಾರದಲ್ಲಿ ಒಪ್ಪಂದಮಾಡಿಕೊಳ್ಳಬೇಕಾದ ವಲಯಗಳು ಹೆಚ್ಚುತ್ತಿವೆ.

ಹೀಗೆ ಒಪ್ಪಂದ ಮಾಡಿಕೊಳ್ಳಬೇಕಾದ ವಲಯಗಳು ಹೆಚ್ಚಿದ ಮಾತ್ರಕ್ಕೆ ಐಕ್ಯಕಾರ್ಯಾಚರಣೆಯು, ತನಗೆ ತಾನೇ, ಯಾವ ಶರತ್ತೂ ಇಲ್ಲದೆ ಬಂದುಬಿಡುವುದಿಲ್ಲ. ಏಕೆಂದರೆ, ಎಲ್ಲರೂ ಒಪ್ಪುವಂಥ ವಿಚಾರದ ಬಗ್ಗೆ ಸಾರ್ವತ್ರಿಕ ಐಕ್ಯದ ಅಗತ್ಯ ಇದ್ದರೂ ಕೂಡ, ಐಕ್ಯಕಾರ್ಯಾಚರಣೆಯನ್ನು ಬೆಳೆಸಬೇಕಾದುದರ ವಿವರಗಳ ಬಗ್ಗೆ ಭಿನ್ನಾಭಿಪ್ರಾಯಗಳು ಇದ್ದೇ ಇವೆ. ಈ ಭಿನ್ನಾಭಿಪ್ರಾಯಗಳನ್ನು ಕಡಿಮೆ ಮಾಡಿಕೊಳ್ಳಬೇಕಾದರೆ ಪರಸ್ಪರ ಚರ್ಚೆಗಳು ತುಂಬಾ ಅಗತ್ಯವಾಗಿ ನಡೆಯಬೇಕು. ಅಂಥ ಚರ್ಚೆಗಳು ನಡೆದಾಗ ಮಾತ್ರ, ಸದ್ಯದ ವಿಚಾರಗಳ ಬಗ್ಗೆ ಒಪ್ಪಂದ ಬಂದು, ಕಾರ್ಯವಿಧಾನಗಳನ್ನು ಕೂಡ ರೂಪಿಸಿಕೊಳ್ಳಬಹುದು. ಆಗ ಮಾತ್ರ ಐಕ್ಯ ಕಾರ್ಯಾಚರಣೆ ಸಾಧ್ಯವಾಗುತ್ತದೆ.

ರೆಡ್ಡಿಯವರ ಪಕ್ಷದ ನೇತೃತ್ವದಲ್ಲಿರುವ ಎ.ಐ.ಟಿ.ಯು.ಸಿ–ಬಿ.ಎಂ.ಎಸ್, ಜೊತೆಗಿರಲಿ- ಸಿ.ಐ.ಟಿ.ಯು.ನ ಜೊತೆ ಯಾವ "ಶರತ್ತುಗಳೂ" ಇಲ್ಲದೆ ಐಕ್ಯ ಕಾರ್ಯಾಚರಣೆ ನಡೆಸಲು ಸಿದ್ಧವಿದೆಯೇ ? ಒಪ್ಪಂದದ ವಲಯಗಳನ್ನು ಕಂಡುಕೊಂಡು ಅವುಗಳನ್ನು ವಿಸ್ತರಿಸಬೇಕಾದರೆ ಸಂವಾದಗಳು, ಭಿನ್ನಾಭಿಪ್ರಾಯಗಳ ಸರಿಪಡಿಸುವಿಕೆ ಇವೆಲ್ಲ ಅಗತ್ಯವಾಗಿ ಬೇಕು.

ಸಾಮೂಹಿಕ ಸಂಘಟನೆಗಳ ಮಟ್ಟದಲ್ಲಿಯೇ ಐಕ್ಯಕಾರ್ಯಾಚರಣೆಯ ಪರಿಸ್ಥಿತಿ ಹೀಗಿರುವಾಗ, ರಾಜಕೀಯ ರಂಗದಲ್ಲಿ ಸಿ.ಪಿ.ಐ. ಮತ್ತು ಸಿ.ಪಿ.ಐ. (ಎಂ) ಗಳು (ಇತರ ವಾಮಪಂಥೀಯ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳೊಡನೆ) ಐಕ್ಯತೆಯನ್ನು ಹೊಂದಬೇಕೆನ್ನುವ ರೆಡ್ಡಿಯವರ ಬೇಡಿಕೆ ತುಂಬಾ ಅವಾಸ್ತವವಾದದ್ದು. ಏಕೆಂದರೆ ಇಲ್ಲಿ ಭಿನ್ನಾಭಿಪ್ರಾಯಗಳು ಇನ್ನೂ ತೀವ್ರವಾಗಿವೆ. ಜನತಾಪಕ್ಷದ ಬಗ್ಗೆ ಇರುವ ಧೋರಣೆಯ ವಿಚಾರದಲ್ಲಿ ನಮಗೂ ಅವರಿಗೂ ಇರುವ ಭಿನ್ನಾಭಿಪ್ರಾಯಗಳ ಬಗ್ಗೆ ರೆಡ್ಡಿಯವರು ಇದೇ ಲೇಖನದಲ್ಲಿಯೇ ಬರೆಯುತ್ತಾರೆ. ಅವರ ಪಕ್ಷ ಅಥವಾ ನಮ್ಮ ಪಕ್ಷ ಹೊಂದಿರುವ ನಿಲುವುಗಳ ಸರಿತಪ್ಪುಗಳು ನಮಗಿಲ್ಲಿ ಸಂಬಂಧಪಡದವು. ಆದರೆ ಇರುವ ವಿಚಾರ ಏನೆಂದರೆ, ಜನತಾಪಕ್ಷದ ಬಗ್ಗೆ ಇರುವ ಧೋರಣೆಗಳಲ್ಲಿ ಅಂಥ ತೀವ್ರ ವ್ಯತ್ಯಾಸಗಳು ಇರುವಾಗ, "ಕರಾರುಗಳಿಲ್ಲದೆ ಐಕ್ಯತೆ" ಸಾಧ್ಯವಾಗುವುದಿಲ್ಲ.

ಎರಡು ಪಕ್ಷಗಳೂ ಭಿನ್ನಾಭಿಪ್ರಾಯ ಹೊಂದಿರುವ ಅನೇಕ ಸಂಗತಿಗಳ ಬಗ್ಗೆ ಮತ್ತು ಇದರ ಬಗ್ಗೆ, ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆಂದು ನಾವು ಸಿ.ಪಿ.ಐ. ನಿಂದ ನಿರೀಕ್ಷಿಸುವುದೂ ಇಲ್ಲ, ನಿಲುವುಗಳನ್ನು ಬದಲಾಯಿಸಿಕೊಳ್ಳಲು ನಾವು ಸಿದ್ಧರಾಗಿಯೂ ಇಲ್ಲ. ಆದ್ದರಿಂದಲೇ ಎರಡು ಪಕ್ಷಗಳ ನಡುವೆ ರಾಜಕೀಯ ಐಕ್ಯತೆ ಬರಬೇಕೆಂದು ಮಾತನಾಡುವುದು ತುಂಬಾ ಅವಸರದ ಮಾತಾಗುತ್ತದೆ ಎಂದು ನಾವು ಭಾವಿಸುತ್ತೇವೆ.

ಅನೇಕ ಸಾಮೂಹಿಕ ಸಂಘಟನೆಗಳು ಒಂದೇ ವಿಚಾರದ ಬಗ್ಗೆ ಐಕ್ಯ ಕಾರ್ಯಾಚರಣೆ ಬೆಳೆಸಿಕೊಳ್ಳುವುದರಿಂದ ಮತ್ತು ರಾಜಕೀಯ ಪ್ರಶ್ನೆಗಳ ಬಗ್ಗೆ ಸಾರ್ವಜನಿಕ ಚರ್ಚೆಗಳನ್ನು ಅವುಗಳ ಜೊತೆ ನಡೆಸುವುದರಿಂದ, ಭಿನ್ನಾಭಿಪ್ರಾಯಗಳು ಕಡಿಮೆಯಾಗುತ್ತಾ ಹೋಗುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ದೇಶದ ಎಲ್ಲ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಯನ್ನು ಸಾಧಿಸುವುದಕ್ಕೆ ಇರುವ ದಾರಿ ಇದೊಂದೇ ಎಂಬುದು ನಮ್ಮ ಭಾವನೆ. ಈ ವಾಸ್ತವಕ್ಕೆ ಕಣ್ಣು ಮುಚ್ಚಿ, "ಶರತ್ತುಗಳಿಲ್ಲದೆ" ಐಕ್ಯತೆಬೇಕು ಎನ್ನುವುದು ತುಂಬಾ ತಪ್ಪಾಗುತ್ತದೆ.

ನಾವು ಇನ್ನಷ್ಟು ನಿಷ್ಠುರವಾಗಿ ಹೇಳುವುದಾದರೆ, ಮೊದಲು ಸಿ.ಪಿ.ಐ. ನಾಯಕರು, ತಮ್ಮ ಪಕ್ಷ ಎಡಪಕ್ಷ ಎಂಬ ವಿಶ್ವಾಸವನ್ನು ಸ್ಥಾಪಿಸಲಿ. ಕೇರಳ ಮತ್ತು ಪ. ಬಂಗಾಳಗಳಲ್ಲಿ, ಕಾಂಗ್ರೆಸ್ಸಿಗೆ ಬದಲು ಕಾಂಗ್ರೆಸ್ಸೇತರ ಸರ್ಕಾರಗಳನ್ನು ತರುವುದರಲ್ಲಿ ಸಫಲವಾಗಿದ್ದ ಎಡಪಕ್ಷಗಳು ಮತ್ತಿತರ ಪ್ರಜಾಸತ್ತಾತ್ಮಕ ಮಿತ್ರರ ಸಂಯುಕ್ತರಂಗವನ್ನು ಒಡೆಯುವುದರಲ್ಲಿ, ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ಸಿನ ಜೊತೆ ಕೈಗೂಡಿಸಿದ ಪಕ್ಷ ಇವರದೇ ಅಲ್ಲವೇ. ಆಗ ಅಸ್ತಿತ್ವದಲ್ಲಿದ್ದ ಎಡ ಮತ್ತು ಪ್ರಜಾಸತ್ತಾತ್ಮಕ ರಂಗಗಳನ್ನು ವಿನಾಶ ಮಾಡುವುದರಿಂದ ಆರಂಭವಾದ ಇವರ ಕಾರ್ಯಕ್ರಮ ತುರ್ತುಪರಿಸ್ಥಿತಿ ಆಳ್ವಿಕೆಯೊಡನೆ ಸಹಕರಿಸುವುದರಲ್ಲಿ ಮುಕ್ತಾಯ ಕಂಡಿತು.

ತಾವೂ (ಸಿ.ಪಿ.ಐ. ನಾಯಕರು) ಮನಃ ಪೂರ್ವಕವಾಗಿ, ಪೂರ್ಣವಾಗಿ ಭಾಗಿಗಳಾಗಿದ್ದ ತುರ್ತುಪರಿಸ್ಥಿತಿ ಆಳ್ವಿಕೆಯ ಅಪಾರ ಅಪರಾಧಗಳ ಬಗ್ಗೆ ಸಿ.ಪಿ.ಐ. ನಾಯಕರು ಇನ್ನೂ ಪಶ್ಚಾತ್ತಾಪ ವ್ಯಕ್ತಪಡಿಸಿಲ್ಲ. ಈ ಕಥೆ ಪುನರಾವರ್ತನೆಯಾಗುವುದಿಲ್ಲವೆಂಬ ಭರವಸೆಯನ್ನು ಅವರು ತಮ್ಮ ಮಿತ್ರ ಕೂಟಕ್ಕೆ ಕೊಡಬೇಕೆಂದು ಕೇಳುವುದು ದೊಡ್ಡ ತಪ್ಪೆ? ಸಿ.ಪಿ.ಐ. (ಎಂ) ಅವರಿಂದ ಕೇಳುತ್ತಿರುವುದು ಇಷ್ಟೆ.

ಪ. ಬಂಗಾಳದಲ್ಲಿ ಇಂದಿರಾ-ಸಿದ್ಧಾರ್ಥರ ಅರೆಫ್ಯಾಸಿಸ್ಟ್ ಕ್ರೂರಾಡಳಿತ ಸ್ಥಾಪನೆಯಾಗುವುದರಲ್ಲಿ ಮತ್ತು ಕೇರಳದಲ್ಲಿ ಅಚ್ಯುತಮೆನನ್-ಕರುಣಾಕರನ್ ಆಡಳಿತ ಸ್ಥಾಪನೆಯಾಗುವುದರಲ್ಲಿ ಇವರು ವಹಿಸಿದ ತಲೆತಗ್ಗಿಸುವಂಥ ಪಾತ್ರದಿಂದ, ಸಿ.ಪಿ.ಐ. ನಾಯಕರು, ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿಯ ಗೆರೆಯಿಂದ ಎಂದೋ ಆಚೆಗೆ ಹೋಗಿಬಿಟ್ಟಿದ್ದಾರೆ. ರೆಡ್ಡಿ ಮತ್ತು ಅವರ ಸಹೋದ್ಯೋಗಿಗಳಿಗೆ ಇದನ್ನು ನೆನಪಿಸುವುದು ಇಷ್ಟವಾಗದಿರಬಹುದು. ಆದರೆ, ಎಂಟು ವರ್ಷಗಳ ಕಾಲ ಅವರ ನೇತೃತ್ವದ ರಾಜ್ಯಸರ್ಕಾರವೊಂದರಲ್ಲಿ ನೊಂದಿರುವ, ಅವರ ಬೆಂಬಲವಿದ್ದ ಇತರ ರಾಜ್ಯಸರ್ಕಾರಗಳು ಮತ್ತು ಕೇಂದ್ರಸರ್ಕಾರದ ಕೈಕೆಳಗೆ ಬೆಂದಿರುವ ಸಾವಿರಾರು ಜನರು ಅವರಿಗೆ ಸರಳ ಮಾತುಗಳಲ್ಲಿ ಹೀಗೆ ಹೇಳಬಯಸುತ್ತಾರೆ: "ಹತ್ತು ವರ್ಷಗಳಿಂದಲೂ ನಿಮ್ಮ ಮೇಲೆ ಮುಸುಕಿರುವ ಅವಮಾನಕ್ಕೆ ಪಶ್ಚಾತ್ತಾಪಪಟ್ಟು, ನೀವು ಒಂದು ಎಡಪಕ್ಷ ಎಂಬುದರ ಬಗ್ಗೆ ವಿಶ್ವಾಸ ಸ್ಥಾಪಿಸಿಕೊಳ್ಳಿ".

ರೆಡ್ಡಿಯವರು ತಪ್ಪಾದನ್ನು ಕರೆದುಕೊಳ್ಳುವ ಹಾಗೆ "ಒಂದು ಸೋದರ ಎಡಪಕ್ಷ"ದ ಜೊತೆ ಐಕ್ಯತೆ ಸಾಧಿಸುವುದಕ್ಕೆ ಹಾಕುವ ಶರತ್ತು ಇದಲ್ಲ. ಒಂದು ದಶಕದ ಅವಧಿಯಲ್ಲಿ ಅವರು ಸಂಪಾದಿಸಿರುವ ಕೊಳೆಯನ್ನು ತೊಳೆದುಕೊಂಡು, ಅದೊಂದು ಎಡಪಕ್ಷ ಎಂದು ಪರಿಗಣಿಸಬೇಕಾಧ ಹಕ್ಕನ್ನು ಸಿ.ಪಿ.ಐ. ನವರು ಪಡೆದುಕೊಳ್ಳಲಿ ಎಂಬ ಸರಳ ಸತ್ಯವನ್ನು ಹೀಗೆ ಹೇಳಿದ್ದೇವಷ್ಟೆ.

ಕೇರಳದಲ್ಲಿರುವ ತಮ್ಮ ಸರ್ಕಾರವು, ಪ. ಬಂಗಾಳ ಮತ್ತು ತ್ರಿಪುರಾಗಳಲ್ಲಿ ಇರುವ ಜ್ಯೋತಿಬಸು ಮತ್ತು ನೃಪೇನ್ ಚಕ್ರವರ್ತಿಗಳ ಸರ್ಕಾರಗಳಷ್ಟೇ ಎಡ ಸರ್ಕಾರವಾಗಿದೆ ಎಂದು ಬಲರಾವ್ ಅವರು ಮತ್ತು ನ್ಯೂ ಏಜ್‌ನಲ್ಲಿ ರಾಜಶೇಖರರೆಡ್ಡಿಯವರು ಪಟ್ಟು ಹಿಡಿದಿದ್ದಾರೆ. ಪ. ಬಂಗಾಳ ಮತ್ತು ತ್ರಿಪುರಾ ಸರ್ಕಾರಗಳಲ್ಲಿ ಅವರನ್ನು ಸೇರಿಸಿಕೊಂಡಿರುವುದಕ್ಕೆ ಪ್ರತಿಫಲವಾಗಿಯೋ ಏನೋ, ಈ ಎಡ ಸಮ್ಮಿಶ್ರರಂಗ ಮತ್ತು ಸರ್ಕಾರವನ್ನು ಸೇರಿಕೊಳ್ಳುವಂತೆ ಸಿ.ಪಿ.ಐ. (ಎಂ.) ಅನ್ನು ಅವರು ಸಹಾನುಭೂತಿಯುಳ್ಳ ದನಿಯಲ್ಲಿ "ಆಹ್ವಾನಿಸು" ತ್ತಾರೆ!

ಸಿ.ಪಿ.ಐ. ನಾಯಕರಿಗಿರುವ ಹಾಗೆ, ಹೇಗಾದರೂ ಸರಿ ಒಂದು ಸರ್ಕಾರದಲ್ಲಿ ಸೇರಿಕೊಂಡುಬಿಡಬೇಕು ಎನ್ನುವ ಕುತೂಹಲ ನಮಗೆ ಇಲ್ಲ ಎಂಬುದನ್ನು ಮೊದಲು ಸ್ಪಷ್ಟಪಡಿಸುತ್ತೇವೆ. ಈ ನಿಲುವನ್ನು ತಾಳುವುದೇ ಆಗಿದ್ದರೆ, ಮಹಾರಾಷ್ಟ್ರದಲ್ಲಿ ಪವಾರ್ ಸರ್ಕಾರ ಮತ್ತು ಅಸ್ಸಾಂನಲ್ಲಿ ಜನತಾಪಕ್ಷದ ಸರ್ಕಾರಗಳು ಜೊತೆಗೆ ಸೇರುವಂತೆ ನಮಗಿತ್ತ ಆಹ್ವಾನಗಳನ್ನು ಕಸಿದು, ಉಪಯೋಗಿಸಿಕೊಂಡಿರುತ್ತಿದ್ದೆವು. 1967ರಲ್ಲಿ ಬಿಹಾರ್, ಉತ್ತರ ಪ್ರದೇಶ ಮತ್ತು ಪಂಜಾಬ್‌ಗಳ ಸಮ್ಮಿಶ್ರ ಸರ್ಕಾರಗಳನ್ನು ಸಿ. ಪಿ. ಐ. ಸೇರಿಕೊಂಡ ಹಾಗೆ, ಅವರ ಹೆಜ್ಜೆಗಳನ್ನು ನಾವು ಅನುಸರಿಸಬಹುದಿತ್ತು.

ಒಂದು ಸರ್ಕಾರವನ್ನು ಸೇರುವುದೇ ಬೇಡವೇ, ಒಂದು ಸರ್ಕಾರವನ್ನು ವಿರೋಧಿಸುವುದೇ ಬೆಂಬಲಿಸುವುದೇ ಎಂಬ ಪ್ರಶ್ನೆಗಳೆಲ್ಲ ನಮಗೆ, ಪ್ರಜಾಪ್ರಭುತ್ವದ ಪ್ರಗತಿ ಮತ್ತು ಜನಸಾಮಾನ್ಯರ ಹಿತಾಸಕ್ತಿಗಳ ರಕ್ಷಣೆ ಮುಂತಾದ ದೊಡ್ಡ ಪ್ರಶ್ನೆಗಳ ಕೈಕೆಳಗೆ ಅಧೀನವಾಗಿರುವಂಥವು. ನಮಗೆ ಸಚಿವ ಪದವಿಗಳನ್ನು ಪಡೆಯುವುದಕ್ಕಿಂತ, ಸಿ.ಪಿ.ಐ. ಅನ್ನು ಅವರು ಸಿಕ್ಕಿಹಾಕಿಕೊಂಡಿರುವ ಕೂಟದಿಂದ ಕಾಪಾಡುವುದರಲ್ಲಿ ಹೆಚ್ಚು ಆಸಕ್ತಿಯಿದೆ.

ಆದ್ದರಿಂದ, ಸಿ.ಪಿ.ಐ. ಅನುಸರಿಸುವ ನೀತಿಯ ವಿರುದ್ಧ ನಾವು ನಿರಂತರವಾಗಿ ಹೋರಾಟ ನಡೆಸುತ್ತೇವೆ. 1977ರಲ್ಲಿ ಆ ನೀತಿಯ ಬೋಳುತನವೆಲ್ಲ ಬಯಲಾಯಿತು. 1974ರ ವರೆಗೆ ತಾವು ಕಾಂಗ್ರೆಸ್ ನೊಡನೆ ಸಹಕರಿಸುವುದು ಸರಿ ಎಂದು ಅವರು ಭಾವಿಸುವುದರಿಂದ, ಬಟಿಂಡಾ ಅಧಿವೇಶನದಲ್ಲಿ ಅವರು ಮಾಡಿಕೊಂಡಿರುವ ಸ್ವವಿಮರ್ಶೆ ತುಂಬಾ ಅತೃಪ್ತಿಕರವಾಗಿದೆ ಎಂದು ನಾವು ಹೇಳಬೇಕಾಗಿದೆ.

ಅವರು ತಪ್ಪಾದು ಸರಿ ಎಂದು ಭಾವಿಸುವುದಾದರೆ, ಕೇರಳ ಮತ್ತು ಪ. ಬಂಗಾಳಗಳ ಎಡನೇತೃತ್ವದ ಸರ್ಕಾರಗಳನ್ನು ಅವರು ಕಾಂಗ್ರೆಸ್ಸಿನ ಜೊತೆ ಪಿತೂರಿ ನಡೆಸಿ ಉರುಳಿಸಿರುವುದು, ಪ. ಬಂಗಾಳದ ಅರೆಫ್ಯಾಸಿಸ್ಟ್ ಆಡಳಿತದಲ್ಲಿ ಕುಖ್ಯಾತ ಪಾತ್ರ ವಹಿಸಿದ್ದು, ತುರ್ತು ದಿನಗಳ ಕೊಲೆಗಳು, ಹಿಂಸೆಗಳು ಇದಕ್ಕೆ ಇಂದು ಕುಪ್ರಸಿದ್ಧವಾಗಿರುವ ಒಂದು ಸರ್ಕಾರಕ್ಕೆ ಅವರು ನೇರ ನಾಯಕತ್ವ ವಹಿಸಿದ್ದು, ಇವೆಲ್ಲವೂ ಸರಿ ಎಂದಾಗುತ್ತದೆ. ಎಡ ಚಳುವಳಿಯನ್ನು ಧಿಕ್ಕರಿಸುವುದರ ಸಂಕೇತವಾಗಿರುವ ಸರ್ಕಾರದಲ್ಲಿ ಭಾಗ ವಹಿಸಲು ಅವರು ನಮ್ಮನ್ನು ಕರೆಯುತ್ತಿದ್ದಾರೆ.

1969ರ ಕೇರಳದ ಸರ್ಕಾರವನ್ನು ಉರುಳಿಸುವುದರಲ್ಲಿ ಅವರು ವಹಿಸಿದ ಪಾತ್ರವನ್ನು ರಾಜಶೇಖರ ರೆಡ್ಡಿ ತಮ್ಮ ಲೇಖನದಲ್ಲಿ ಸಮರ್ಥಿಸಿಕೊಳ್ಳುತ್ತಾರೆ. ಆಗಿದ್ದ ಮುಖ್ಯಮಂತ್ರಿಯು (ನಾನು) "ಜೊತೆಗಿದ್ದ ಪಕ್ಷಗಳನ್ನು ಮುಖ್ಯವಾಗಿ ನಮ್ಮ ಪಕ್ಷವನ್ನು ಹಳ್ಳಕ್ಕೆ ಕೆಡವಲು, ತಾವೇ ರಾಜೀನಾಮೆ ಕೊಟ್ಟರು" ಎಂದು ಪೂರ್ಣ ಸುಳ್ಳನ್ನು ಹೇಳಿದ್ದಾರೆ.

ಹಾಗೆ ನೋಡಿದರೆ, ಹಿಂದಿನ ಸಿ.ಪಿ.ಐ. ಮುಖ್ಯಮಂತ್ರಿಗಳಾದ ಅಚ್ಯುತಮೆನನ್‌ರು (ನನಗೆ ಬರೆದ ಪತ್ರವನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗಿತ್ತು) ಹೇಳುವ ಹಾಗೆ, "ಸಂಯುಕ್ತರಂಗವನ್ನು ಮತ್ತು ಸಚಿವ ಸಂಪುಟವನ್ನು ನೀವು ಪುನರ್ರಚಿಸಲೆಂಬ ಉದ್ದೇಶದಿಂದ". ಸಿ.ಪಿ.ಐ.(ಎಂ), ಕೆ.ಎಸ್.ಪಿ, ಕೆ.ಟಿ.ಪಿ. ಇವುಗಳಿಗೆ ಸೇರಿದ ಎಲ್ಲ ಸಚಿವರ ಮೇಲೂ ಭ್ರಷ್ಟಾಚಾರದ ಆಪಾದನೆಯನ್ನು ಹೊರಿಸಲಾಯಿತು.

ಆದ್ದರಿಂದ, ರೆಡ್ಡಿಯವರು ಆಪಾದಿಸುವ ಹಾಗೆ, "ಜೊತೆಗಿದ್ದ ಪಕ್ಷಗಳನ್ನು ಕೆಡಹುವ" ಪ್ರಯತ್ನವನ್ನು ಸಿ.ಪಿ.ಐ. (ಎಂ) ಮಾಡಲಿಲ್ಲ. ಹಾಗೆ ನೋಡಿದರೆ, ಅವರ ಪಕ್ಷವು ಸಂಯುಕ್ತರಂಗದ ಒಂದು ಗುಂಪಿನೊಡನೆ ಸೇರಿ, ಕರುಣಾಕರನ್ ನೇತೃತ್ವದ ಕಾಂಗ್ರೆಸ್ಸಿನೊಂದಿಗೆ ಪಿತೂರಿ ನಡೆಸಿ, ಸಿ.ಪಿ.ಐ. (ಎಂ) ಮತ್ತು ಅದರ ಜೊತೆ ಸೌಹಾರ್ದದಲ್ಲಿದ್ದ ಸಂಯುಕ್ತರಂಗದ ಇತರ ಪಕ್ಷಗಳನ್ನು "ಕೆಡವಲು" ಪ್ರಯತ್ನ ಮಾಡಿತು.

ಎಡಪಂಥೀಯ ಚಳುವಳಿಗೆ ಅವರು ಮಾಡಿರುವ ನಗ್ನ ವಿಶ್ವಾಸ ದ್ರೋಹವನ್ನು ಸಮರ್ಥಿಸಿಕೊಳ್ಳಲು ಒಬ್ಬ ಕೇಂದ್ರ ಸೆಕ್ರೆಟೇರಿಯೆಟ್ ಸದಸ್ಯರು ಈ ರೀತಿ ಸುಳ್ಳು ಹೇಳುವುದನ್ನು ನೋಡಿದರೆ, 1969ರಲ್ಲಿ ಮತ್ತು ನಂತರದ ವರ್ಷಗಳಲ್ಲಿ ಅವರು ಮಾಡಿರುವ ಕೆಲಸಗಳ ಬಗ್ಗೆ ಆ ಪಕ್ಷಕ್ಕೆ ಯಾವ ವಿಷಾದವೂ ಇಲ್ಲವೆಂಬುದು ಗೊತ್ತಾಗುತ್ತದೆ. ಅಂದಮೇಲೆ, ಸಿ.ಪಿ.ಐ. (ಎಂ) ನವರು ಅವರ ಜೊತೆ ರಾಜಕೀಯ ಐಕ್ಯತೆ ಸಾಧಿಸಬೇಕೆಂದು ಅವರು ಹೇಗೆ ನಿರೀಕ್ಷಿಸುತ್ತಾರೆ?

ಹಳೆಯದನ್ನು ತೆಗೆದು ತೋಡುವುದರಲ್ಲಿ ನಮಗೆ ಯಾವ ಆಸಕ್ತಿಯೂ ಇಲ್ಲವೆಂಬುದನ್ನು ಅವರಿಗೆ ಸ್ಪಷ್ಟ ಮಾಡೋಣ. ಆದರೆ ಹಿಂದಿನದನ್ನೆಲ್ಲಾ ತೆಗೆದು, ನಮ್ಮ ಬಗ್ಗೆ ಸಲ್ಲದ ಸುಳ್ಳುಗಳನ್ನು ಹೇಳಿದರೆ, ನಾವು ಅದನ್ನು ಸರಿಪಡಿಸಲೇಬೇಕಾಗುತ್ತದೆ. ಇದನ್ನು ಮಾಡಿ, ನಾವು ಸಿ.ಪಿ.ಐ. ನಾಯಕರಿಗೆ ಹೀಗೆ ಮನವಿ ಮಾಡುತ್ತೇವೆ: "ನಮ್ಮಿಬ್ಬರಿಗೂ ತೃಪ್ತಿಯಾಗುವ ಹಾಗೆ ರಾಜಕೀಯ ಭಿನ್ನಾಭಿಪ್ರಾಯಗಳು ಸರಿ ಹೊಂದುವವರೆಗೂ ದಯವಿಟ್ಟು ರಾಜಕೀಯ ಐಕ್ಯತೆಯ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿ. ಆ ಮಧ್ಯೆ, ಜನತೆಯ ವಿಚಾರಗಳ ಬಗ್ಗೆ ಒಪ್ಪಂದದ ವಲಯಗಳನ್ನು ವಿಸ್ತರಿಸಿಕೊಳ್ಳುವುದಕ್ಕೆ ಐಕ್ಯ ಕಾರ್ಯಾಚರಣೆಯನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ನಡೆಸಿ".

Printed by P. Ramachandra Rao ...